www.buntsanghablr.com

ಸಂಪುಟ ೪ ಸಂಚಿಕೆ ೬

# ಸ್ನೇಹ ಚಿಂತನೆ

ಮಾಸ ಪತ್ರಿಕೆ




BUNTS' SANGHA BANGALORE

(A Charitable Institution)

324, Chord Road, Vijayanagar, Bengaluru - 560 040.

P : 080 - 2339 9323 / 2339 9635 E: info@buntsanghablr.com


ಸಂಚಿಕೆ ಬೆಲೆ ರೂ 1/-


ATTIDE
A Boutique Hotel by Swathi Group
1st
We sincerely thank everyone who has supported us ever since our establishment since a year ago. Your consistent support and encouragement has enabled us to achieve great things and become one of the best hotels near the Bangalore airport! We promise to continue offering exceptional service and look forward to serving you over the years to come!
Urban FLAVOURS
Café DelicaS
BAR
5 UNIQUE BANQUET & CONFERENCE VENUES
10-1000 CAPACITY
3 SPECIALITY RESTAURANTS
55 EXCLUSIVE ROOMS
ATTIDE HOTEL
Opp Jakkur Flying Club, Yelahanka, BENGALURU - 560065
080 22177177
91089 87500
info@attidehotels.com
www.attidehotels.com

# ಸ್ನೇಹ ಚಿಂತನೆ

*Monthly Magazine Published by*

## BUNTS' SANGHA BANGALORE

**VOL. 14** **MAY 2018** **ISSUE 05**



**ಸಾಹಿತ್ಯ - ಪ್ರಕಾಶನ ಸಮಿತಿ**

ಅಧ್ಯಕ್ಷರು :
**ಎಸ್. ಅಶೋಕ್‌ಕುಮಾರ್ ಶೆಟ್ಟಿ**

ಗೌ|| ಸಂಪಾದಕರು:
**ರವಿರಾಜ್ ಎಸ್. ಶೆಟ್ಟಿ**

ಸಲಹಾ ಮಂಡಳಿ:
**ಶ್ರೀ ಬಿ.ಎಲ್.ಎನ್. ಹೆಗ್ಡೆ**
**ಶ್ರೀ ಎ. ಗಿರೀಶ್ ರೈ**
**ಶ್ರೀ ಎಂ. ರತ್ನಾಕರ್ ಶೆಟ್ಟಿ**
**ಶ್ರೀ ಸಂತೋಷ್ ಶೆಟ್ಟಿ**

ಸಂಪಾದಕ ಮಂಡಳಿ:
**ಶ್ರೀ ಎನ್. ಗೋಪಾಲ ಶೆಟ್ಟಿ**
**ಶ್ರೀ ಚಂದ್ರಶೇಖರ್ ಆಳ್ವ**
**ಶ್ರೀ ಪ್ರಕಾಶ್ ಶೆಟ್ಟಿ. ಎಂ**
**ಶ್ರೀಮತಿ ರಾಜಶ್ರೀ. ಕೆ. ಶೆಟ್ಟಿ**

ಪೋಷಕ ಸದಸ್ಯರು:
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು
**ಸಂತೋಷ್ ಶೆಟ್ಟಿ. ಜೆ**


ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**–ಸಂಪಾದಕ**

## ಒಳ ಪುಟಗಳಲ್ಲಿ...


| | | **ಪುಟ** |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌ|| ಕಾರ್ಯದರ್ಶಿ ವರದಿ | 4 |
| 4. | ಮಹಿಳಾ ವಿಭಾಗ ರಜತ ಸಂಭ್ರಮ – ದತ್ತಿನಿಧಿ ಸ್ಥಾಪನೆ | 5 |
| 5. | ಬಿಸು ಹಬ್ಬ (ಯುಗಾದಿ) ಆಚರಣೆ | 6 |
| 6. | ಶ್ರೀ ವರಸಿದ್ಧಿ ವಿನಾಯಕನಿಗೆ ರಜತ ದ್ವಾರ ಸಮರ್ಪಣೆ | 10 |
| 7. | **ಇವರು ನಮ್ಮವರು** – ಡಾ. ಎಸ್.ಚಂದ್ರಶೇಖರ ಶೆಟ್ಟಿ | 12 |
| 8. | ದೇಶದಲ್ಲಿ ಅಪಘಾತಗಳನ್ನು ನಿಯಂತ್ರಿಸಲು ವಾಹನಗಳಲ್ಲಿ ಏಕರೂಪದ ನಂಬರ್ ಪ್ಲೇಟ್‌ಗಳ ಅಗತ್ಯತೆ | 15 |
| 9. | ಕನ್ನಡ ಎನೆ ಕಿವಿ ನಿಮಿರುವುದು! | 18 |
| 10. | ದೈನಂದಿನ ಜೀವನಕ್ಕೆ ವ್ಯಕ್ತಿಯ ಆಚರಣೆಗಳು ಮತ್ತು ಸಂಪ್ರದಾಯಗಳ ಪ್ರಸ್ತುತತೆ | 24 |
| 11. | Youth & their Social Responsibilities | 26 |
| 12. | Matrimonial Services Committee | 33 |


**ಮುಖಪುಟ**

**ಶ್ರೀ ವರಸಿದ್ಧಿ ವಿನಾಯಕ ರಜತದ್ವಾರ ಸಮರ್ಪಣೆ**

**ಬಿಸು (ಯುಗಾದಿ) ಆಚರಣೆ**



# ಸಂಪಾದಕೀಯ

ಸಂಪಾದಕೀಯ

ಪರೀಕ್ಷೆಗಳು ಮುಗಿದು ಫಲಿತಾಂಶವೂ ಪ್ರಕಟಗೊಂಡಿದೆ. ಯಾವುದೇ ವಿದ್ಯಾರ್ಥಿಯ ಜೀವನದಲ್ಲಿ ಹತ್ತನೇ ತರಗತಿ ಹಾಗೂ ಪದವಿ ಪೂರ್ವ ಶಿಕ್ಷಣ ಪ್ರಮುಖ ಘಟ್ಟಗಳು. ಈ ಹಂತದಲ್ಲಿ ಸರಿಯಾದ ನಿರ್ಧಾರ ಕೈಗೊಳ್ಳುವುದು ವಿದ್ಯಾರ್ಥಿ ದೆಸೆಯಲ್ಲಿ ಮಹತ್ವದ ಸಂಗತಿಯಾಗಿದೆ. ಆ ಕಾರಣದಿಂದಲೇ ಈ ಎರಡು ಹಂತಗಳನ್ನು ವಿದ್ಯಾರ್ಥಿ ಜೀವನದಲ್ಲಿ ಮಹತ್ವದ ತಿರುವುಗಳೆಂದೇ ಪರಿಗಣಿಸಲಾಗುತ್ತದೆ.

ತಮ್ಮ ಭವಿಷ್ಯದ ಜೀವನವನ್ನು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಪದವಿ ಪೂರ್ವ ತರಗತಿಯಲ್ಲಿ ಯಾವ ವಿಷಯಗಳ ಸಂಯೋಜನೆಯನ್ನು ಆಯ್ಕೆಮಾಡಿಕೊಂಡರೆ ಉತ್ತಮ ಎಂಬ ನಿರ್ಧಾರವನ್ನು ಹತ್ತನೇ ತರಗತಿಯಿಂದಲೇ ತೆಗೆದುಕೊಳ್ಳಬೇಕಾದ ಅನಿವಾರ್ಯತೆ ವಿದ್ಯಾರ್ಥಿಗಳಿಗೆ ಎದುರಾಗುತ್ತದೆ. ಅದೇ ರೀತಿ ಪದವಿ ಪೂರ್ವ ಶಿಕ್ಷಣದ ನಂತರದ ನಮ್ಮ ಗುರಿ ಸಾಧನೆಯ ನಿಟ್ಟಿನಲ್ಲಿ ಇರುವ ಹಲವಾರು ಅವಕಾಶಗಳನ್ನು ತಿಳಿದುಕೊಂಡು ಅದಕ್ಕೆ ಪೂರಕವಾದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಈ ಎರಡು ಹಂತಗಳಲ್ಲಿ ವಿದ್ಯಾರ್ಥಿಗಳು ತಮ್ಮ ಆಸಕ್ತಿಗಳಿಗೆ ಅನುಗುಣವಾಗಿ ನಿರ್ಧಾರವನ್ನು ತೆಗೆದುಕೊಳ್ಳುವುದು ಒಳ್ಳೆಯದು. ಆದರೆ ಹೆಚ್ಚಿನ ಮಕ್ಕಳು ತಮ್ಮ ಪೋಷಕರ ಅಥವಾ ಸಂಬಂಧಿಗಳ ಆಸೆ, ನಿರೀಕ್ಷೆ ಹಾಗೂ ಒತ್ತಡಗಳನ್ನು ಪೂರೈಸುವ ಉದ್ದೇಶವಿಟ್ಟುಕೊಂಡೇ ತಮ್ಮ ಶಿಕ್ಷಣದ ಆಯ್ಕೆಯನ್ನು ಮಾಡಿಕೊಳ್ಳುತ್ತಾರೆ. ಮಕ್ಕಳ ಆಸಕ್ತಿ ಸಾಮರ್ಥ್ಯಗಳೇನು ಎಂಬುದನ್ನು ಪೋಷಕರು ಕಂಡುಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಎಂಜಿನಿಯರಿಂಗ್, ವೈದ್ಯ, ದಂತ ವೈದ್ಯ ಪದವಿಗಳಂತಹ ಕೆಲವು ಆಯ್ಕೆಗಳನ್ನು ಹೊರತುಪಡಿಸಿ ಇತರ ಆಯ್ಕೆಗಳ ಕುರಿತಂತೆ ತಿಳುವಳಿಕೆಯ ಕೊರತೆ ಹೆಚ್ಚಿನ ಪೋಷಕರನ್ನು ಬಾಧಿಸುತ್ತಿದೆ.

ಪ್ರತಿ ಮಗುವಿನಲ್ಲೂ ಒಂದು ಪ್ರತಿಭೆ ಅಡಗಿರುತ್ತದೆ. ಚಿತ್ರ ಕಲಾವಿದ, ಸಂಗೀತಕಾರ, ಸಾಹಿತಿ, ಕ್ರೀಡಾಪಟು.. ಹೀಗೆ ಏನಾದರೂ ಆಗುವ ಆಸಕ್ತಿ ಸಾಮರ್ಥ್ಯ ಪ್ರತಿ ಮಗುವಿನಲ್ಲಿ ಇರುತ್ತದೆ. ಅವರ ಆಸಕ್ತಿಯ ಕ್ಷೇತ್ರ ಯಾವುದು ಹಾಗೂ ಅವರಿಗೆ ಯಾವ ಕ್ಷೇತ್ರದೆಡೆಗೆ ಸೆಳೆತವಿದೆ ಎಂಬುದನ್ನು ಕಂಡುಕೊಳ್ಳುವುದರತ್ತ ನಾವು ಗಮನಹರಿಸಬೇಕು. ಮಕ್ಕಳಲ್ಲಿರುವ ಸ್ವಂತಿಕೆ, ಸೃಜನಶೀಲತೆಗಳನ್ನು ಗುರುತಿಸಿ ಅವರಿಗಿಷ್ಟವಾದ ಕ್ಷೇತ್ರ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಿದರೆ ಮಕ್ಕಳ ಪ್ರತಿಭೆ ಅರಳುವುದರಲ್ಲಿ ಸಂಶಯವಿಲ್ಲ. ಆಸಕ್ತಿಯ ವೃತ್ತಿಯಲ್ಲಿ ತೊಡಗಿಕೊಂಡರೆ ಮಕ್ಕಳು ಅದ್ಭುತ ಯಶಸ್ಸು ಪಡೆಯುತ್ತಾರೆ. ಎಂಜಿನಿಯರಿಂಗ್ ಅಥವಾ ಮೆಡಿಕಲ್‌ಗೆ ಸೇರುವುದೇ ಜೀವನದ ಪರಮ ಗುರಿಯಾಗಬೇಕಿಲ್ಲ.

ಸಮಾಜಕ್ಕೆ ಎಂಜಿನಿಯರ್ ಅಥವಾ ವೈದ್ಯ ಎಷ್ಟು ಅಗತ್ಯವೋ, ಇತರ ವೃತ್ತಿಗಳ ಅಗತ್ಯವೂ ಅಷ್ಟೇ ಇದೆ. ತಮಗಿಷ್ಟವಿಲ್ಲದ ಎಂಜಿನಿಯರಿಂಗ್ ಅಥವಾ ಇನ್ಯಾವುದೋ ವೃತ್ತಿ ಆಯ್ಕೆ ಮಾಡಿಕೊಳ್ಳುವುದಕ್ಕಿಂತ ಪ್ರತಿಭೆಗೆ ತಕ್ಕಂತೆ ಅವಕಾಶ ನೀಡಿದ್ದಲ್ಲಿ ಮುಂದೆ ಸಂತಸದ ಜೀವನ ನಡೆಸುತ್ತಾರೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಮಕ್ಕಳು ಎಷ್ಟೇ ಅಂಕಗಳನ್ನು ಗಳಿಸಿರಲಿ ಕೆಲವೇ ಕೆಲವು ಆಕರ್ಷಕ ವೃತ್ತಿಗಳ ಆಯ್ಕೆಗಳಿಗೆ ಸೀಮಿತವಾಗುವ ಬದಲು, ಅದರ ಆಚೆಗೆ ಇರುವ ವಿಪುಲ ಮತ್ತು ವಿಸ್ತಾರವಾದ ಆಯ್ಕೆಗಳ ಬಗೆಗೆ ಪರಿಣಿತರಿಂದ ಮಾರ್ಗದರ್ಶನ ಪಡೆದು ಮಕ್ಕಳ ಶಿಕ್ಷಣದ ಆಯ್ಕೆ ಕುರಿತು ಭವಿಷ್ಯದ ನಿರ್ಧಾರ ಕೈಗೊಳ್ಳುವುದು ಹೆಚ್ಚು ಸೂಕ್ತ.

ವಂದನೆಗಳೊಂದಿಗೆ,

**ರವಿರಾಜ್ ಎಸ್. ಶೆಟ್ಟಿ**

Email: ravidani6@gmail.com



# ಅಧ್ಯಕ್ಷರ ನುಡಿ

ಆತ್ಮೀಯ ಬಂಧುಗಳೇ,

ಕರ್ನಾಟಕ ರಾಜ್ಯ ಚುನಾವಣೆಗೆ ಸಿದ್ಧವಾಗಿ ಸ್ನೇಹ ಚಿಂತನೆ ನಿಮ್ಮ ಕೈ ಸೇರುವಷ್ಟರಲ್ಲಿ ಹೊಸ ಸರಕಾರ ಅಧಿಕಾರಕ್ಕೆ ಬರಲಿದೆ. ಉತ್ತಮ ಆಡಳಿತಗಾರರನ್ನು ಆಯ್ಕೆ ಮಾಡತಕ್ಕಂತಹ ಅವಕಾಶ ನಮ್ಮ ನಿಮ್ಮ ಕೈಯಲ್ಲಿದೆ. ಮತದಾರರು ಪ್ರಜ್ಞಾವಂತರಾಗಿ ಆತ್ಮಾವಲೋಕನ ಮಾಡಬೇಕಾದ ಅನಿವಾರ್ಯತೆ, ನಮ್ಮ ಪ್ರಗತಿಗೆ ಸಂದ ಮತ್ತು ಸಲ್ಲಬೇಕಾದ, ಪ್ರಾಮಾಣಿಕ ಪ್ರಯತ್ನಗಳು, ಎಷ್ಟರ ಮಟ್ಟಿಗೆ ಕಾರ್ಯಗತವಾಗಿದೆ ಎಂಬ ಸರಳ ವಿಚಾರಗಳ ಚಿಂತನ ಮಂಥನ ನಡೆಯಲೇಬೇಕು.

ಕಳೆದ ತಿಂಗಳು ಆಸ್ಟ್ರೇಲಿಯಾದ ಗೋಲ್ಡ್‌ಕೋಸ್ಟ್‌ನಲ್ಲಿ ನಡೆದ ಕಾಮನ್ ವೆಲ್ತ್ ಗೇಮ್ಸ್‌ನಲ್ಲಿ ಭಾರತೀಯ ವೈಟ್ ಲಿಫ್ಟಿಂಗ್ ತಂಡದ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುವ ಅವಕಾಶ ನಮ್ಮ ಪಾಲಿಗೆ ಒದಗಿ ಬಂದಿತ್ತು. ವೈಟ್ ಲಿಫ್ಟರ್ಸ್ ಒಟ್ಟಾರೆ 5 ಚಿನ್ನದ ಪದಕ, 2 ಬೆಳ್ಳಿ ಮತ್ತು 2 ಕಂಚಿನ ಪದಕ ಪಡೆದು ಪದಕ ಪಟ್ಟಿಯನ್ನು ಶ್ರೀಮಂತಗೊಳಿಸಿದರು. 70 ರಾಷ್ಟ್ರಗಳ ಸ್ಪರ್ಧೆಯಲ್ಲಿ ಭಾರತೀಯರು ಒಟ್ಟಾರೆ ತೃತೀಯ ಸ್ಥಾನಗಳಿಸಿ, ಜಗತ್ತಿನ ಕ್ರೀಡಾ ಕ್ಷೇತ್ರದಲ್ಲಿ ಭಾರತದ ಕೀರ್ತಿ ಪತಾಕೆಯನ್ನು ಹಾರಿಸಿದರು. ಉಜಿರೆ ಕಾಲೇಜಿನ ಹಳೆ ವಿದ್ಯಾರ್ಥಿ ಶ್ರೀ ಗುರುರಾಜ್ ಬೆಳ್ಳಿ ಪದಕ ಪಡೆದ ಕರ್ನಾಟಕದ ಕ್ರೀಡಾಪಟು. ಎಲ್ಲಾ ಕ್ರೀಡಾ ಪಟುಗಳಿಗೆ ನಮ್ಮ ಬಂಟ ಬಂಧುಗಳ ಅಭಿನಂದನೆಗಳು.

ಬೆಂಗಳೂರು ಮಹಾನಗರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಧ್ಯಮ ವರ್ಗದ ಜನರಿಂದಲೇ ತುಂಬಿರುವ ಪ್ರದೇಶ ವಿಜಯನಗರ. ಇಲ್ಲಿ ಬಂಟರ ಸಂಘ ಬೆಂಗಳೂರು, ಶೈಕ್ಷಣಿಕವಾಗಿ ಹೊತ್ತಿಸಿದ ಕಿಡಿ ಇಂದು ಪ್ರಕಾಶಮಾನವಾಗಿ ಉರಿದು ಪಿಯುಸಿ ಫಲಿತಾಂಶದಲ್ಲಿ 93% ಗಳಿಸಿದ್ದು ಎರಡು ವಿದ್ಯಾರ್ಥಿಗಳು 9ನೇ ರ್‍ಯಾಂಕ್ ಪಡೆದು ನಮಗೆಲ್ಲ ಹೆಮ್ಮೆಯನ್ನುಂಟು ಮಾಡಿದ್ದಾರೆ. ಅಂದು ಶೈಕ್ಷಣಿಕ ಕನಸನ್ನು ಕಂಡು ಕೆ.ಪಿ ರಾಮಣ್ಣ ಶೆಟ್ಟರು 2 ಮಕ್ಕಳಿಂದ ಪ್ರಾರಂಭಿಸಿದ ಸಂಸ್ಥೆ ಇಂದು ದಾನಿಗಳಾದ ಆರ್.ಎನ್ ಶೆಟ್ಟಿಯವರ ಕೊಡುಗೆಯಿಂದ 4000 ಮಕ್ಕಳಿಗೆ ವಿದ್ಯಾಭ್ಯಾಸ ನೀಡುತ್ತಿದೆ. ಕೀರ್ತಿ ಶೇಷ ಐ ಎಂ. ಜಯರಾಮ ಶೆಟ್ಟಿಯವರ ಆಡಳಿತಾವಧಿಯಲ್ಲಿ ಹೊಸ ಕಟ್ಟಡಗಳ ನಿರ್ಮಾಣದೊಂದಿಗೆ ಶೈಕ್ಷಣಿಕ ಕ್ರಾಂತಿಗೆ ನಾಂದಿ ಹಾಡಿತು. ಬಂಧುಗಳೇ ಬಂಟರ ಸಂಘ ಶಾಲೆ ನಡೆಸುವುದು ಹಣ ಗಳಿಕೆಗಲ್ಲ ನಮ್ಮದು ಸಮಾಜ ಮತ್ತು ಸಾಮಾಜಿಕ ಕಳಕಳಿ. ನಮ್ಮಲ್ಲಿ ಕಳೆದ ಎರಡು ವರ್ಷಗಳ ಅವಧಿಗಳಲ್ಲಿ ಶುಲ್ಕದಲ್ಲಿ ಹೆಚ್ಚಳ ಮಾಡಿಲ್ಲ. ಆದರೆ ಶೈಕ್ಷಣಿಕ ಮೌಲ್ಯಗಳಿಗೆ ಕೊರತೆ ಇಲ್ಲ. ಹಲವಾರು ಚೇತನಗಳು ಶಾಲಾಭಿವೃದ್ಧಿಗೆ ಶ್ರಮಿಸಿದ್ದಾರೆ. ಅವರೆಲ್ಲರಿಗೂ ನಮ್ಮ ನೆನಹುಗಳು. ವಿಶೇಷವಾಗಿ ನಮ್ಮ ಅಧ್ಯಾಪಕ ವೃಂದಕ್ಕೆ ನಮ್ಮ ನಿಮ್ಮೆಲ್ಲರ ಪರವಾಗಿ ಹೃತ್ಪೂರ್ವಕ ಅಭಿನಂದನೆ ಅಭಿವಂದನೆ. ಕಳೆದ ವರ್ಷ ಕೂಡಾ ಎರಡು ರ್‍ಯಾಂಕ್ ಗಳಿಸಿದ್ದು ನಿಮಗೆ ನೆನಪಿರಬಹುದು. ಈ ಬಾರಿಯ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 100% ಫಲಿತಾಂಶ ನಮ್ಮದು.

ನಿರಂತರ ಚಟುವಟಿಕೆಗಳು ನಮ್ಮ ಕ್ರೀಯಾಶೀಲತೆಗೆ ಸಾಕ್ಷಿ. ಸದಸ್ಯರಿಗೆ ವಿನೂತನ ಕ್ರಾರ್ಯಕ್ರಮಗಳನ್ನು ನೀಡುತ್ತಾ ಬಂದಿದ್ದೇವೆ. ಕಾನೂನು ವಿಭಾಗದ ಚೇರ್‌ಮೆನ್ ಡಾ। ವೈ ಉಮಾನಾಥ್ ಶೆಟ್ಟಿಯವರು ಒಂದು ಅತ್ಯುತ್ತಮ ಕಾರ್ಯಕ್ರಮವಾದ ಕಾನೂನು ಅರಿವು ಕಾರ್ಯಗಾರವರನ್ನು ಆಯೋಜಿಸಿದ್ದರು. ನಮ್ಮ ಸಂಕೀರ್ಣದ ಆವರಣದಲ್ಲಿರುವ ಶ್ರೀ ವರಸಿದ್ಧಿ ವಿನಾಯಕ ಮಂದಿರಕ್ಕೆ ಸಮಯವಿದ್ದರೆ ಒಮ್ಮೆ ಭೇಟಿ ನೀಡಿ, ರಜತ ಕವಚದಿಂದ ಕಳೆಕಟ್ಟಿದ ನಮ್ಮ ಪ್ರಾರ್ಥನಾ ಮಂದಿರದಲ್ಲಿ ಶಾಂತಿ ಸಮಾಧಾನವನ್ನು ಕಾಣುವಿರಿ.

ರಜಾ ದಿನಗಳು ಕಳೆದು ಶಾಲೆ/ಕಾಲೇಜುಗಳು ಪ್ರಾರಂಭವಾಗತೊಡಗಿದೆ. ಶೈಕ್ಷಣಿಕ ದೃಷ್ಟಿಯಿಂದ ಪೋಷಕರು ಪ್ರಾರಂಭದಿಂದ ಅಭ್ಯಾಸ ನಿರತರಾಗಿರಲು ತಮ್ಮ ಮಕ್ಕಳಿಗೆ ತಿಳಿ ಹೇಳಬೇಕು. ಒತ್ತಡವನ್ನು ತಪ್ಪಿಸುವಲ್ಲಿ ನಿರಂತರ ಅಭ್ಯಾಸ ಬಹಳಷ್ಟು ಸಹಕಾರಿ. ಹಾಗೆಯೇ ಸ್ವಲ್ಪ ಮಟ್ಟಿನ ಶಾರೀರ ದಕ್ಷತೆ, ಅಂದರೆ ವ್ಯಾಯಾಮದ ಕಡೆಗೆ ಗಮನ ಹರಿಸಬೇಕು. ಜೊತೆಯಲ್ಲಿ ಧಾರ್ಮಿಕ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕು. ಯಶಸ್ಸಿನ ಹಾದಿ ನಿಮ್ಮದಾಗುವುದರಲ್ಲಿ ಸಂಶಯವೇ ಇಲ್ಲ. ಸದಸ್ಯ ಬಂಧುಗಳಿಗೆ ಆಯುರಾರೋಗ್ಯ ಭಾಗ್ಯಗಳನ್ನಿತ್ತು ಶ್ರೀ ವರಸಿದ್ಧಿ ವಿನಾಯಕ ಕಾಪಾಡಲಿ ಎಂಬ ಹಾರೈಕೆಯೊಂದಿಗೆ,

ನಿಮ್ಮ ಸೇವಾಕಾಂಕ್ಷಿ
**ಚಂದ್ರಹಾಸ ರೈ ಡಿ.**
ಅಧ್ಯಕ್ಷರು



# ಗೌರವ ಕಾರ್ಯದರ್ಶಿಗಳ ವರದಿ

ಗೌರವಾನ್ವಿತ ಸದಸ್ಯರೇ,

ಬಿಸು (ಯುಗಾದಿ) ಹಬ್ಬವನ್ನು ಸಂಘದ ಆವರಣದಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಣಿಪಾಲ ಸಮೂಹ ಆಸ್ಪತ್ರೆಗಳ ಚೇರ್‌ಮೆನ್ ಡಾ' ಹೆಚ್. ಸುದರ್ಶನ ಬಲ್ಲಾಳ್ ಹಾಗೂ ಗೌರವ ಅತಿಥಿಗಳಾಗಿ ಆದಿಚುಂಚನಗಿರಿ ವಿಶ್ವ ವಿದ್ಯಾಲಯದ ಉಪಕುಲಪತಿಗಳಾದ ಡಾ' ಎಸ್. ಚಂದ್ರಶೇಖರ್ ಶೆಟ್ಟಿಯವರು ಭಾಗವಹಿಸಿದ್ದರು. ಕರ್ನಾಟಕ ಸರಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ನಿವೃತ್ತ ನಿರ್ದೇಶಕರಾದ ಶ್ರೀ ಬಿ.ಎನ್.ಶೆಟ್ಟಿಯವರನ್ನು ಸನ್ಮಾನಿಸಲಾಯಿತು. ಪೂರ್ವಾಹ್ನ ಶ್ರೀ ವರಸಿದ್ಧಿ ವಿನಾಯಕ ಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪೇಜಾವರ ಮಠದ ವಿಶ್ವೇಶತೀರ್ಥ ಶ್ರೀಪಾದರ ಅಮೃತ ಹಸ್ತದಿಂದ ಶ್ರೀ ವಿನಾಯಕ ಮಂದಿರಕ್ಕೆ ರಜತ ದ್ವಾರ ಸಮರ್ಪಿಸಲಾಯಿತು.

ದಿನಾಂಕ 28.04.2018 ರಂದು ಕಾನೂನು ವಿಭಾಗ ಆಯೋಜಿಸಿದ್ದ ಕಾನೂನು ಅರಿವು ಕಾರ್ಯಾಗಾರ ಯಶಸ್ವಿಯಾಗಿ ಜರುಗಿತು. ದೈನಂದಿನ ಬದುಕಿನಲ್ಲಿ ಕಾನೂನಿನ ಅರಿವಿನ ಅಗತ್ಯತೆಯ ಬಗ್ಗೆ ಅತಿಥಿಗಳು ಸವಿವರವಾಗಿ ತಿಳಿಸಿದರು. ಈ ನಿಟ್ಟಿನಲ್ಲಿ ಡಾ. ವೈ ಉಮಾನಾಥ್ ಶೆಟ್ಟಿಯವರ ಪ್ರಯತ್ನ ಶ್ಲಾಘನೀಯವಾದದ್ದು.

2017–18 ರ ಶೈಕ್ಷಣಿಕ ಸಾಲಿನ ಪಿಯುಸಿ ಫಲಿತಾಂಶಗಳು ಹೊರಬಂದಿದ್ದು, ಸಂಘದ ಆರ್.ಎನ್.ಎಸ್. ವಿದ್ಯಾನಿಕೇತನ ಪದವಿಪೂರ್ವ ಕಾಲೇಜಿಗೆ ಉತ್ತಮ ಫಲಿತಾಂಶ ಬಂದಿದೆ. ದ್ವಿತೀಯ ಪಿಯುಸಿ ವಿಜ್ಞಾನ ಹಾಗೂ ಕಾಮರ್ಸ್ ವಿಭಾಗದಲ್ಲಿ ಸರಾಸರಿ 93% ಫಲಿತಾಂಶ ಬಂದಿದ್ದು, ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಾದ ಹೃಷಿಕೇಶ್ ಇ. ಹಾಗೂ ಆರ್. ಸುದರ್ಶನ್ ಇವರುಗಳು ರಾಜ್ಯಮಟ್ಟದಲ್ಲಿ 9ನೇ ರ್‍ಯಾಂಕ್ ಪಡೆಯುವುದರೊಂದಿಗೆ ವಿದ್ಯಾಸಂಸ್ಥೆಗೆ ಕೀರ್ತಿ ತಂದಿರುತ್ತಾರೆ. ಶಾಲಾಡಳಿತ ಮಂಡಳಿಯ ಚೇರ್‌ಮೆನ್ ಡಾ| ಆರ್.ಎನ್ ಶೆಟ್ಟಿ, ಸದಸ್ಯರಾದ ಡಾ| ಎನ್. ಆರ್ ಶೆಟ್ಟಿ, ಡಾ| ಚಂದ್ರಶೇಖರ್ ಶೆಟ್ಟಿ ಹಾಗೂ ಶ್ರೀ ಕೆ. ಸದಾನಂದ ಶೆಟ್ಟಿಯವರ ಸಕಾಲಿಕ ಮಾರ್ಗದರ್ಶನ ಹಾಗೂ ಚಿಂತನೆಗಳು ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸುವಲ್ಲಿ ಹಾಗೂ ಚುನಾಯಿತ ಪ್ರತಿನಿಧಿಗಳು ಸಕ್ರೀಯವಾಗಿ ಕಾರ್ಯನಿರ್ವಹಿಸುವಲ್ಲಿ ಸಹಕಾರಿಯಾಗಿದೆ.

ಯಲಚಗುಪ್ಪೆ ಜಮೀನಿಗೆ ಸಂಬಂಧಿಸಿದ ಕೋರ್ಟ್ ಕೇಸ್ ಮುಂದಿನ ಜೂನ್ ತಿಂಗಳಿಗೆ ನಿಗದಿಯಾಗಿದ್ದು ಜತೆಜತೆಯಲ್ಲಿ ಮಾತುಕತೆ ಮೂಲಕ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮುಂದುವರೆದಿದೆ.

ಜುಲೈ ತಿಂಗಳ ಅಂತ್ಯದಲ್ಲಿ ಸಂಘದ ನೂತನ ಆಡಳಿತ ಮಂಡಳಿ ಆಯ್ಕೆಗೆ ಸಂಬಂಧಿಸಿದಂತೆ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು. ಅತ್ಯಂತ ಪಾರದರ್ಶಕ ಹಾಗೂ ಪ್ರಾಮಾಣಿಕ ಚುನಾವಣೆ ನಡೆಸಿಕೊಡುವುದು ನಮ್ಮ ಗುರಿ.

ಆರಂಭದ ದಿನಗಳಲ್ಲಿ ಸಂಘದ ಜವಾಬ್ದಾರಿ ವಹಿಸಿಕೊಳ್ಳಲು ಹಿರಿಯರೆಲ್ಲರೂ ಒಂದೆಡೆ ಸೇರಿ ಸಮರ್ಥರನ್ನು ಗುರುತಿಸಿ ಒತ್ತಾಯ ಪೂರ್ವಕವಾಗಿ ಆಯ್ಕೆ ಮಾಡುತ್ತಿದ್ದರು. ಸಮಾಜಮುಖಿ ಚಿಂತನೆಗಳೊಂದಿಗೆ ಹತ್ತಾರು ವರ್ಷಗಳ ಕಾಲ ವಿವಿಧ ಉಪಸಮಿತಿಗಳಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸಿ ಸಂಘ ಹಾಗೂ ಸಮಾಜದ ಬೇಕು-ಬೇಡಗಳ ಭವಿಷ್ಯದ ಚಿಂತನೆ ಹಾಗೂ ಹಿರಿಯರ ಮಾರ್ಗದರ್ಶನದೊಂದಿಗೆ ಚುನಾವಣೆಗೆ ಆಯ್ಕೆ ಬಯಸುತ್ತಿದ್ದ ಕಾಲವೊಂದಿತ್ತು. ಹಾಗಾಗಿ ಯಾವುದೇ ಸಂಘ-ಸಂಸ್ಥೆಗಳಲ್ಲಿ ಜವಾಬ್ದಾರಿಗಳನ್ನು ಸ್ವೀಕರಿಸುವ ಮೊದಲು ಆಯಾಯ ಸಂಸ್ಥೆಯ ಚಟುವಟಿಕೆಗಳಲ್ಲಿ ತಮ್ಮನ್ನು ಸಕ್ರೀಯವಾಗಿ ತೊಡಗಿಸಿಕೊಂಡು ಸಂಘ ಸಮಾಜದ ಭವಿಷ್ಯದ ಅಗತ್ಯಗಳ ಬಗ್ಗೆ ಕನಿಷ್ಠ ಯೋಜನಾ ಚಿತ್ರಣವಾದರೂ ನಮ್ಮ ಮುಂದಿರಬೇಕು. ಹಾಗಾಗಿ ಭವಿಷ್ಯದಲ್ಲಿ ಅನುಭವಿಗಳ ಹಾಗೂ ಭವಿಷ್ಯದ ಯೋಜನೆಗಳ ಬಗ್ಗೆ ಚಿಂತನೆ ಹೊಂದಿರುವ ಸಮರ್ಥರು ಆಯ್ಕೆಯಾಗಿ ಬರಲಿ ಎನ್ನುವುದು ನಮ್ಮ ಆಶಯ.

ವಂದನೆಗಳೊಂದಿಗೆ,

**● ಸಂತೋಷ್ ಶೆಟ್ಟಿ ಜೆ.**

ಗೌರವ ಕಾರ್ಯದರ್ಶಿ

## ಮಹಿಳಾ ವಿಭಾಗ ರಜತ ಸಂಭ್ರಮ – ದತ್ತಿನಿಧಿ ಸ್ಥಾಪನೆ



"ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ" ಎನ್ನುವ ಮಾತಿನಂತೆ ಬಂಟರ ಸಂಘದ ಮಹಿಳಾ ವಿಭಾಗ ತನ್ನ ಬೆಳ್ಳಿ ಹಬ್ಬದ ಸವಿನೆನಪಿಗೆ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನೆರವಾಗುವ ನಿಟ್ಟಿನಲ್ಲಿ 6 ಲಕ್ಷ ರೂಪಾಯಿಗಳನ್ನು ಒಟ್ಟುಗೂಡಿಸಿ ಶಾಶ್ವತ ದತ್ತಿ ನಿಧಿಯೊಂದನ್ನು ಬಂಟರ ಸಂಘದಲ್ಲಿ ಸ್ಥಾಪಿಸಿದೆ.

ನಮ್ಮ ಸಮಾಜದಲ್ಲೂ ಮಹಿಳಾ ಸಾಧಕರಿಗೆ ಪ್ರೋತ್ಸಾಹಗಳು ಸಿಗಬೇಕು ಆ ನಿಟ್ಟಿನಲ್ಲಿ ನಮ್ಮ ಬಂಟರ ಸಂಘದ ಹಿರಿಯರು ಸಂಘದ ಅಡಿಯಲ್ಲಿ ಮಹಿಳಾ ವಿಭಾಗವನ್ನು ಸ್ಥಾಪಿಸಿದ್ದರು. ಎಲ್ಲರ ಬೆಂಬಲ ಸಹಕಾರದಿಂದ ಮಹಿಳೆಯರ, ಹೆಣ್ಣು ಮಕ್ಕಳ ಕಲ್ಯಾಣಕ್ಕೆ ಸಾಕಷ್ಟು ಕಾರ್ಯಕ್ರಮಗಳನ್ನು ರೂಪಿಸಿ ಇಪ್ಪತ್ತೈದು ವರ್ಷಗಳಿಂದ ಗುರುತರ ಕೆಲಸಗಳನ್ನು ಮಾಡಿದ ಹೆಮ್ಮೆ ಬಂಟರ ಸಂಘದ ಮಹಿಳಾ ವಿಭಾಗದ್ದು. ಬೆಳ್ಳಿ ಹಬ್ಬ ಕಾರ್ಯಕ್ರಮ ಆಯೋಜಿಸುವಾಗಲೇ ಸಂಘದಲ್ಲಿ ಮಹಿಳಾ ವಿಭಾಗದ ಸಾಧನೆ ಶಾಶ್ವತವಾಗಿರಿಸುವ ಆಲೋಚನೆಯೊಂದಿತ್ತು. ಸುಂದರವಾಗಿ ಮುಕ್ತಾಯಗೊಂಡ ಕಾರ್ಯಕ್ರಮದ ಖರ್ಚು ವೆಚ್ಚಗಳನ್ನೆಲ್ಲ ತೆಗೆದು ಆರು ಲಕ್ಷ ರೂಗಳನ್ನು ಉಳಿಸಿ ಅದನ್ನು ಆರ್ಥಿಕವಾಗಿ ಸಂಕಷ್ಟದಲ್ಲಿರುವ ಪ್ರತಿಭಾವಂತ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನೀಡುವ ಸಂಕಲ್ಪ ಮಾಡಿದೆವು. ಅದರಂತೆ 6 ಲಕ್ಷ ರೂಗಳ ದತ್ತಿನಿಧಿಯನ್ನು ಸ್ಥಾಪಿಸಿ **ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಶಿಕ್ಷಣದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯರ ಉನ್ನತ ವ್ಯಾಸಂಗಕ್ಕೆ ಸಹಾಯ** ನೀಡುವ ನಿರ್ಧಾರ ಮಾಡಿ ಯುಗಾದಿ ಹಬ್ಬದ ಶುಭದಿನದಂದು ನೆರೆದಿದ್ದ ಅತಿಥಿ ಗಣ್ಯರ ಹಾಗೂ ಸಂಘದ ಸದಸ್ಯರ ಸಮ್ಮುಖದಲ್ಲಿ ಬಂಟರ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಿಗೆ ಹಸ್ತಾಂತರಿಸಿದೆವು. ಒಂದು ಮಹಾನ್ ಕಾರ್ಯದಲ್ಲಿ ಕೈ ಜೋಡಿಸಿದ ಎಲ್ಲರಿಗೂ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಸಲ್ಲಿಸುತ್ತಾ ಇನ್ನಷ್ಟು ಹೆಚ್ಚಿನ ಕೆಲಸಗಳು ಮಹಿಳಾ ವಿಭಾಗದಿಂದ ಮುಂದಿನ ದಿನಗಳಲ್ಲಿ ಆಗಲಿ ಎನ್ನುವ ಆಶಯದೊಂದಿಗೆ.

**● ಅಮೃತ ಎಸ್. ಶೆಟ್ಟಿ**

ಚೇರ್‌ಪರ್ಸನ್, ಮಹಿಳಾ ವಿಭಾಗ

# ಬಿಸು ಹಬ್ಬ (ಯುಗಾದಿ) ಆಚರಣೆ




ಅಶ್ವಿನಿ ನಕ್ಷತ್ರಕ್ಕೆ ರವಿ ಪ್ರವೇಶಿಸುವ ಕಾಲ ಹೊಸ ವರ್ಷ. ಬೆಳಗೆದ್ದು ಸ್ನಾನ ಮಾಡಿ, ಹೊಸ ಬಟ್ಟೆಯುಟ್ಟು ಕಣಿಯ ಮಧ್ಯದಲ್ಲಿರುವ ಕನ್ನಡಿಯಲ್ಲಿ ಇಷ್ಟ ದೇವರ ದರ್ಶನ ಮಾಡಿ ಹೊಸ ವರುಷ ಎಲ್ಲರ ಜೀವನದಲ್ಲಿ ಸುಖ ಸಂತೋಷ ತರಲಿ ಎಂದು ಪ್ರಾರ್ಥಿಸಿ ಎಳೆ ಗೋಡಂಬಿ ಹಾಕಿ ತಯಾರಿಸಿದ ಪಾಯಸ ತಿಂದು ಜೀವನ ಸಿಹಿಯಾಗಿರಲಿ ಎಂದು ಆಶಿಸುವ ಹಬ್ಬ.

ನಾವು ಬಂಟರು ಮೂಲತ ಕೃಷಿಯನ್ನೇ ಅವಲಂಭಿಸಿ ಕೊಂಡು ಜೀವನಕಟ್ಟಿಕೊಂಡವರು. ನಾವು ಕೃಷಿ ಮಾಡುವ ಗದ್ದೆಗಳಲ್ಲಿ ಹೆಚ್ಚಾಗಿ ಮಲಗದ್ದೆಯಲ್ಲಿ ಅಲ್ಲಲ್ಲಿ ಭತ್ತದ ಹೊಟ್ಟು ಮತ್ತೆ ಹುಲ್ಲನ್ನು ಸುಟ್ಟು ಆರು ಸುತ್ತು ಎತ್ತುಗಳಿಂದ ಉಳುಮೆ ಮಾಡಿ ಕೃಷಿ ಕೆಲಸಗಳಿಗೆ ಚಾಲನೆ ನೀಡುವುದು ಕುಂದಗನ್ನಡದೂರು ಕುಂದಾಪುರ ಪರಿಸರದಲ್ಲಿ ಕಂಡು ಬರುವ ಯುಗಾದಿ ಹಬ್ಬದ ಆಚರಣಾ ವಿಶೇಷ. ಇದನ್ನು ಆರೂಡ ಹಬ್ಬ ಎಂತಲೂ ಕರೆಯುತ್ತಾರೆ. ಗೇಣಿ ಪದ್ಧತಿ ಚಾಲ್ತಿಯಲ್ಲಿದ್ದ ಕಾಲದಲ್ಲಿ ಹೊಟ್ಟನ್ನ ಸುಟ್ಟವನೇ ಆ ಗದ್ದೆಯಲ್ಲಿ ಕೃಷಿಯನ್ನು ಮಾಡಬೇಕು. ಗೇಣಿ ಒಪ್ಪಂದ ಅಲ್ಲಿಂದಲೇ ಆರಂಭ. ಯಾವುದೇ ವ್ಯಾಜ್ಯಗಳಿದ್ದರೂ ಯುಗಾದಿ ಮುನ್ನವೇ ಬಗೆ ಹರಿಸಿಕೊಳ್ಳಬೇಕು.

ಬೆಂಗಳೂರು ಬಂಟರ ಸಂಘದ ಆವರಣದಲ್ಲಿ ಬಿಸು (ಯುಗಾದಿ) ಹಬ್ಬವನ್ನು ಬಿಸು ಕಣಿ ಇಡುವುದರೊಂದಿಗೆ ಸಾಂಪ್ರದಾಯಿಕವಾಗಿ ಸಂಭ್ರಮದಿಂದ ಆಚರಿಸಲಾಯಿತು. ವೇದಿಕೆಯಲ್ಲಿ ಉಪಸ್ಥಿತರಿದ್ದ ಪದಾಧಿಕಾರಿಗಳು ಹಾಗೂ ಅತಿಥಿಗಳು ದೀಪ ಬೆಳಗುವುದರ ಮೂಲಕ ಸಭಾ ಕಾರ್ಯಕ್ರಮ ಆರಂಭಗೊಂಡಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮಣಿಪಾಲ ಸಮೂಹ ಆಸ್ಪತ್ರೆಗಳ ಚೇರ್‌ಮೆನ್ ಡಾ। ಹೆಚ್. ಸುದರ್ಶನ ಬಲ್ಲಾಳ್‌ರವರು ನಾವು ನಡೆದು ಬಂದ ಹಾದಿಯನ್ನು ಸದಾ ಕಾಲ ನೆನಪಿಟ್ಟುಕೊಳ್ಳಬೇಕು. ಜೀವನದ ಕಷ್ಟದ ದಿನಗಳು ಕಲಿಸುವ ಪಾಠ ಮುಂದಿನ ಜೀವನದಲ್ಲಿ ಎಂದೂ ಎಡವದಂತೆ ಮುನ್ನಡೆಸುತ್ತದೆ ಎಂದರು. ದೈವ ದೇವರುಗಳ ಅನುಗ್ರಹದ ಜೊತೆಗೆ ಪರಿಶ್ರಮದ ಬದುಕು ನಮ್ಮದಾದರೆ ಗೆಲುವು ಸದಾ ಕಟ್ಟಿಟ್ಟ ಬುತ್ತಿ ಎಂದು ಡಾ. ಸುದರ್ಶನ ಬಲ್ಲಾಳ್ ಹೇಳಿದರು.

ಗೌರವ ಅತಿಥಿಗಳಾಗಿ ಹಬ್ಬದ ಆಚರಣೆಯಲ್ಲಿ ಪಾಲ್ಗೊಂಡಿದ್ದ ಶಿಕ್ಷಣ ಕ್ಷೇತ್ರದ ಹರಿಕಾರ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳಾದ ಡಾ। ಎಸ್. ಚಂದ್ರಶೇಖರ ಶೆಟ್ಟಿಯವರು ಮಾತನಾಡಿ ಯುಗಾದಿಯ ದಿನ ಎಳೆ ಗೋಡಂಬಿಯ ಪಾಯಸದ ಸವಿ ಎಂದೂ ಮರೆಯಲು ಸಾಧ್ಯವಿಲ್ಲ ಎಂದು ತಮ್ಮ ಬಾಲ್ಯದ ದಿನಗಳನ್ನು ಮೆಲುಕು ಹಾಕಿದರು. ಒಂದು ಮಗುವಿನ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುವ ಶಿಕ್ಷಣ ಪದ್ಧತಿಯ ಅವಶ್ಯಕತೆಯ ಬಗ್ಗೆ ಪ್ರತಿಪಾದಿಸಿದ ಡಾ। ಶೆಟ್ಟಿಯವರು ಎಳವೆಯಲ್ಲಿಯೇ ಮಕ್ಕಳಿಗೆ ಮೌಲ್ಯಯುತ ಶಿಕ್ಷಣವನ್ನು ನೀಡಬೇಕು, ಮನಸ್ಸು ಹಾಗೂ







ಮೆದುಳು ಎರಡಕ್ಕೂ ಕೆಲಸ ನೀಡುವ ಶಿಕ್ಷಣ ಇಂದಿನ ಸಮಾಜದ ಅವಶ್ಯಕತೆ ಎಂದರು.

ಬಂಟರ ಸಂಘದಿಂದ ಸನ್ಮಾನಿತಗೊಂಡ ಶ್ರೀ ಬಿ.ಎನ್. ಶೆಟ್ಟಿಯವರು ಸಂಘದ ಸ್ಥಳದಾನಿಗಳನ್ನು ಹಾಗೂ ಸಂಘವನ್ನು ಕಟ್ಟಿ ಬೆಳೆಸಲು ಶ್ರಮಿಸಿದ ಹಿರಿಯರನ್ನು ನೆನಪಿಸಿಕೊಂಡು, ಸಮುದಾಯದ ಬಂಧುಗಳು ಸಂಘದ ಕಾರ್ಯ ಚಟುವಟಿಕೆಗಳಲ್ಲಿ ಹೆಚ್ಚು ಹೆಚ್ಚು ಪಾಲ್ಗೊಳ್ಳಬೇಕೆಂದರು.

ಸಂಘದ ಅಧ್ಯಕ್ಷರಾದ ಶ್ರೀ ಡಿ. ಚಂದ್ರಹಾಸ ರೈಯವರು ಪ್ರಾಸ್ತಾವಿಕವಾಗಿ ಮಾತನಾಡಿ ಸಂಘದ ಕಾರ್ಯಚಟುವಟಿಕೆಗಳ ಸಂಕ್ಷಿಪ್ತ ವಿವರಗಳನ್ನು ಸದಸ್ಯಬಾಂಧವರಿಗೆ ನೀಡಿದರು.

ಸಂಘದ ಗೌರವ ಕಾರ್ಯದರ್ಶಿ ಶ್ರೀ ಜೆ. ಸಂತೋಷ್ ಶೆಟ್ಟಿಯವರು ಸ್ವಾಗತಿಸಿ, ಜಂಟಿ ಕಾರ್ಯದರ್ಶಿ ಶ್ರೀಮತಿ ಕಾಂತಿ ಶೆಟ್ಟಿಯವರು ವಂದನಾರ್ಪಣೆಗೈದರು. ಶ್ರೀಮತಿ ಮೀರಾ ಕೆ. ಶೆಟ್ಟಿ ಮತ್ತು ತಂಡದವರು ಪ್ರಾರ್ಥನೆಯನ್ನು ನೆರವೇರಿಸಿದರು. ಶ್ರೀ ಉಳ್ತೂರು ಅಜಿತ್ ಶೆಟ್ಟಿಯವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.

ಮುಂದೆ ಸಂಘದ ಸದಸ್ಯ ಬಾಂಧವರು ಪ್ರಸ್ತುತ ಪಡಿಸಿದ ಸಾಂಸ್ಕೃತಿಕ ಮನರಂಜನಾ ಕಾರ್ಯಕ್ರಮವು ಸ್ವಾಗತ ನೃತ್ಯದೊಂದಿಗೆ ಆರಂಭಗೊಂಡು, ಶ್ರೀ ವಿದ್ವಾನ್ ಕುಮಾರ್‌ರವರ ನಿರ್ದೇಶನದಲ್ಲಿ ಮೂಡಿಬಂದ "ಸತ್ಯನಾಪುರ ಸಿರಿ" ನಾಟಕ ಸಭಿಕರ ಮೆಚ್ಚುಗೆ ಗಳಿಸಿತು.

ಚಂದ್ರನ ಚಲನೆಯ ಆಧಾರದಲ್ಲಿ ತಿಂಗಳು ವರ್ಷಗಳ ಲೆಕ್ಕಾಚಾರದ ಪ್ರಕಾರದಲ್ಲಿ ಭೂಮಿಯ ಸುತ್ತ ಚಂದ್ರ 12 ಸುತ್ತು ಬಂದರೆ ಅದು ಒಂದು ವರ್ಷ. ಅದೇ ಚಾಂದ್ರಮಾನ ಪದ್ಧತಿ. ಅದೇ ರೀತಿ ಭೂಮಿ ಸೂರ್ಯನಿಗೆ ಒಂದು ಸುತ್ತು ಬರಲು ಬೇಕಾಗುವ ಸಮಯ 365 ದಿನಗಳು. ಅದನ್ನು 12 ಭಾಗಗಳನ್ನಾಗಿ ಮಾಡಿದರೆ ಒಂದೊಂದು ತಿಂಗಳು ಅದು 12 ರಾಶಿಗಳಿಗನುಗುಣವಾಗಿ. ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಭೂಮಿ ಕ್ರಮಿಸಿದ ಅವಧಿ ಒಂದು ತಿಂಗಳು ಇದು ಸೌರಮಾನ ಪದ್ಧತಿಯ ಲೆಕ್ಕಾಚಾರ. ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತ್ತಿದೆ ಹೊಸ ವರುಷಕ್ಕೆ ಹೊಸ ಹರುಷವ ಹೊಸತು ಹೊಸತು ತರುತಿದೆ.

● **ಉಳ್ತೂರು ಅಜಿತ್ ಶೆಟ್ಟಿ**


## ಸ್ನೇಹ ಚಿಂತನೆಯ ಜಾಹೀರಾತು ದರಗಳು

| | ಪುಟ | ಪ್ರತೀ ಸಂಚಿಕೆಗೆ | 6 ಸಂಚಿಕೆಗೆ | 12 ಸಂಚಿಕೆಗೆ | ಜಾಹೀರಾತಿನ ಅಳತೆ |
|---|---|---|---|---|---|
| 1 | ಒಳ ಪುಟ – ಕಲರ್ | 5000 | 25000 | 45000 | 19.5 x 16 cm |
| 2 | ಒಳ ಪುಟ – ಬ್ಲ್ಯಾಕ್ & ವೈಟ್ | 3000 | 15000 | 25000 | 19.5 x 16 cm |
| 3 | ಅರ್ಧ ಪುಟ – ಬ್ಲ್ಯಾಕ್ & ವೈಟ್ | 1500 | 6000 | 12000 | 9.5 x 16 cm |

ತಮ್ಮ ಜಾಹೀರಾತು ಕೋರಲ್‌ಡ್ರಾ/ಪಿ.ಡಿ.ಎಫ್./ಜೆ.ಪಿ.ಜೆ.ನಲ್ಲಿ ವಿನ್ಯಾಸ ಮಾಡಿ ಸಿ.ಡಿ.ಯಲ್ಲಿ ಅಥವಾ ಸಂಘದ ಇಮೈಲ್: (info@buntsanghablr.com)ಗೆ ಕಳುಹಿಸಬಹುದು.

# Bunts Sangha RNS Vidyaniketan Composite PU College

## II PU BOARD EXAMS RESULT 2017-18

### College Toppers

COMMERCE

| | |
|---|---|
| Economics | 97 |
| Business Studies | 100 |
| Accountancy | 100 |
| Statistics | 96 |
| Hindi | 95 |
| English | 91 |



**CHANCHAL A**
579 (96.50%)



**Prakruthi D**
571 (95.17%)



**Lavanya R**
570 (95.00%)



**Manikandan E**
565 (94.17%)



**Nandini M**
564 (94.00%)



**Yashaswini R**
563 (93.83%)



**Varshitha J Alur**
556 (92.67%)



**Manasa N**
554 (92.33%)



**Chandana K**
554 (92.33%)



**Ranjitha M**
553 (92.17%)



**Aishwarya J**
551 (91.83%)



**Vamshipriya**
550 (91.67%)



**Bhavana P**
547 (91.17%)



**Akshitha R**
544 (90.67%)



**Pavithra N**
544 (90.67%)



**Bhoomika S**
543 (90.50%)



**Archana L**
542 (90.33%)



**Prajwal Y**
541 (90.17%)



**Dimple Gelhoth S**
540 (90.00%)



**Megha Babu**
540 (90.00%)



**Yashaswini J**
538 (89.67%)

## ಶ್ರೀ ವರಸಿದ್ಧಿ ವಿನಾಯಕನಿಗೆ

# ರಜತ ದ್ವಾರ ಸಮರ್ಪಣೆ



ಸಂಘದ ಆವರಣದಲ್ಲಿರುವ ಶ್ರೀ ವರಸಿದ್ಧಿ ವಿನಾಯಕನ ಮಂದಿರದಲ್ಲಿ ದಿನಾಂಕ 14.04.2018 ಬೆಳಿಗ್ಗೆ 10.30ಕ್ಕೆ ಪೇಜಾವರ ಶ್ರೀ ಅಧೋಕ್ಷಜ ಮಠದ ಹಿರಿಯ ಯತಿವರ್ಯರಾದ ಪರಮ ಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಅಮೃತ ಹಸ್ತದಿಂದ ಶ್ರೀ ವಿನಾಯಕ ದೇವರ ಸನ್ನಿಧಾನಕ್ಕೆ ರಜತ ದ್ವಾರ ಹಾಗೂ ಪಾಣಿ ಪೀಠವನ್ನು ಭಕ್ತಿ ಪೂರ್ವಕವಾಗಿ ಸಮರ್ಪಿಸಲಾಯಿತು.

ಬಂಟರ ಸಂಘದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕನಿಗೆ ಕಳೆದ ಹಲವಾರು ವರ್ಷಗಳಿಂದ ಆಯೋಜಿಸಿರುವ ಹಲವು ಕಾರ್ಯಕ್ರಮಗಳಲ್ಲಿ ಬೆಳ್ಳಿಯ ಮುಖವಾಡ, ಪಾಣಿಪೀಠ, ಪ್ರಭಾವಳಿ, ಮೂಷಿಕ ವಾಹನ ಕವಚ, ಚಿನ್ನದ ಸಟ್ಟಿಗೆ ಸೇರಿದಂತೆ ಹಲವು ಅಗತ್ಯವಿರುವ ವಸ್ತುಗಳನ್ನು ದಾನಿಗಳ ನೆರವಿನಿಂದ ಶ್ರೀ ವಿನಾಯಕ ದೇಗುಲಕ್ಕೆ ಸಮರ್ಪಿಸಲಾಗಿತ್ತು. ಇದಕ್ಕೆ ಪೂರಕವಾಗಿ ಸೌರಮಾನ ಯುಗಾದಿಯ ಶುಭದಿನದಂದು ಬೆಳ್ಳಿಯ ರಜತ ದ್ವಾರವನ್ನು ಸಮರ್ಪಿಸಲಾಯಿತು. ಪೂರ್ವಾಹ್ನ 7.00 ಗಂಟೆಗೆ ಫಲ ಪಂಚಾಮೃತ ಅಭಿಷೇಕ ಇತ್ಯಾದಿ ಪೂಜಾ ಕಾರ್ಯಕ್ರಮಗಳೊಂದಿಗೆ ಸಂಘದ ಅಧ್ಯಕ್ಷರಾದ ಶ್ರೀ ಡಿ. ಚಂದ್ರಹಾಸ ರೈ ದಂಪತಿಗಳ ಪೂಜಾದೀಕ್ಷೆ ಯೊಂದಿಗೆ, ಪ್ರಾಥನಾ ಮಂದಿರ ಸಮಿತಿಯ ಚೇರ್‌ಮೆನ್ ಶ್ರೀ ಕಟ್ಕೇರೆ ರತ್ನಾಕರ ಶೆಟ್ಟಿ ದಂಪತಿಗಳ ಹಾಗೂ ಕಾರ್ಯಕ್ರಮಕ್ಕೆ ಆಗಮಿಸಿದ್ದ ಭಕ್ತರ ಉಪಸ್ಥಿತಿಯಲ್ಲಿ ಪೂಜ್ಯ ಶ್ರೀ ಪಾದರ ಪಾದ ಪೂಜೆಯನ್ನು ನೆರವೇರಿಸಲಾಯಿತು. ನಂತರ ಶ್ರೀಪಾದರು ಆಶೀರ್ವಚನ ನೀಡಿದರು.

ಭಕ್ತರು ಭಕ್ತಿಯಿಂದ ಸಮರ್ಪಿಸುವ ಪೂಜೆಗೆ ಸಂಪ್ರೀತನಾಗುವ ಗಣಪ ಸಮಕಾಲೀನ ವಿದ್ಯಾಮಾನಗಳಿಗೆ ಹೊಂದಿಕೊಳ್ಳುವಷ್ಟು ಮತ್ತಾರು ಹೊಂದಿಕೊಳ್ಳಲಾರರು. ಒಟ್ಟಾರೆ ಈತ ಕಲ್ಪನಾತೀತ. ಹೊಸ ವಾಹನ ಖರೀದಿ, ವ್ಯಾಪಾರ ಪ್ರಾರಂಭ, ಗೃಹ ಪ್ರವೇಶ, ಮದುವೆ ಹೀಗೆ ಪ್ರತಿಯೊಂದು ಕಾರ್ಯವೂ ನಿರಾಂತಕವಾಗಿ ನೆರವೇರಲಿ ಎಂದು ಮೊರೆಯಿಡುವುದು ಗಣಪತಿಗೆ.

ಮಧ್ಯಾಹ್ನ 12.00 ಗಂಟೆಗೆ ಮಹಾಮಂಗಳಾರತಿ ನಡೆಯಿತು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಎಸ್.ಅಮೃತಾ ಶೆಟ್ಟಿ ಮತ್ತು ಬಳಗದವರಿಂದ ಭಜನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಭಕ್ತಾದಿಗಳಿಗೆ ಅನ್ನಸಂತರ್ಪಣೆಯನ್ನು ನೀಡಲಾಯಿತು.

ವಿಶೇಷ ಆಹ್ವಾನಿತರಾಗಿ ಮಾನ್ಯ ವಸತಿ ಸಚಿವರಾದ ಶ್ರೀ ಎಂ. ಕೃಷ್ಣಪ್ಪನವರು, ಗೋವಿಂದರಾಜನಗರದ ಶಾಸಕರಾದ ಶ್ರೀ ಪ್ರಿಯಕೃಷ್ಣ, ಎಂ.ಆರ್.ಜಿ ಸಮೂಹ ಸಂಸ್ಥೆಗಳ ಮುಖ್ಯಸ್ಥರಾದ ಶ್ರೀ ಕೆ. ಪ್ರಕಾಶ್ ಶೆಟ್ಟಿಯವರು ಆಗಮಿಸಿದ್ದರು. ಆಗಮಿಸಿದ್ದ ಎಲ್ಲಾ ಭಕ್ತಾಭಿಮಾನಿಗಳಿಗೆ ಗಣ್ಯರಿಗೆ ಮತ್ತು ದಾನಿಗಳಿಗೆ ಪೇಜಾವರ ಶ್ರೀ ಪಾದರು ಮಂತ್ರಾಕ್ಷತೆಯೊಂದಿಗೆ ಆಶೀರ್ವದಿಸಿ ದೇಗುಲದ ಪ್ರಸಾದ ನೀಡಿದರು.

ಈ ದೇವತಾ ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಭಕ್ತಾದಿಗಳಿಗೂ ಪ್ರಾರ್ಥನಾ ಮಂದಿರ ಸಮಿತಿಯ ಪರವಾಗಿ ವಂದನೆಗಳು. ಕಾರ್ಯಕ್ರಮದ ನಿರ್ವಹಣೆಯಲ್ಲಿ ಸಹಕರಿಸಿದ ಸಂಘದ ಆಡಳಿತ ಅಧಿಕಾರಿ ಶ್ರೀ ರತ್ನಾಕರ ಹೆಗ್ಡೆ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು.

## ರಜತ ದ್ವಾರ ಮತ್ತು ಪಾಣಿಪೀಠ ನಿರ್ಮಿಸಲು ದೇಣಿಗೆ ನೀಡಿದ ದಾನಿಗಳ ವಿವರಗಳು:

| | | | |
|---|---|---|---|
| ಬಂಟರ ಸಂಘ ಬೆಂಗಳೂರು | –350000/– | ಶ್ರೀ ಎಂ. ಕೃಷ್ಣಪ್ಪ | – 250000/ |
| ಶ್ರೀ ಪ್ರಿಯಾಕೃಷ್ಣ | –250000/– | ಶ್ರೀಮತಿ ಸುಜಯ ಜಯಪ್ರಸಾದ್ ಶೆಟ್ಟಿ | – 50,000/– |
| ಶ್ರೀ ಸುಬ್ರಹ್ಮಣ್ಯ ಶೆಟ್ಟಿ. ಟಿ | –50,000/– | ಶ್ರೀ ಆರ್. ಉಪೇಂದ್ರ ಶೆಟ್ಟಿ | – 40,000/– |
| ಶ್ರೀ ಸುಧಾಕರ್ ಶೆಟ್ಟಿ, ಕೂಲ್ ಕಾರ್ನರ್ | –30,000/– | ಶ್ರೀ ಮುಲ್ಕಿ ನಾರಾಯಣ ಶೆಟ್ಟಿ | –25,000/– |
| ಶ್ರೀ ದೀಪಕ್ ಶೆಟ್ಟಿ | – 20,000/– | ಶ್ರೀ ಕೆ. ರತ್ನಾಕರ್ ಶೆಟ್ಟಿ | –20,000/– |
| ಶ್ರೀ ಕೆ. ಭೋಜರಾಜ್ ಶೆಟ್ಟಿ | – 20,000/– | ಶ್ರೀಮತಿ ಗೀತಾ ಎಲ್.ಎನ್ ಶೆಟ್ಟಿ | – 20,000/– |
| ಶ್ರೀಮತಿ ಜ್ಯೋತಿ ದಿನಕರ್ ಶೆಟ್ಟಿ | –20,000/– | ಶ್ರೀಮತಿ ಸರ್ವಾಣಿ ಜಿ ರೈ | – 15,000/– |
| ಶ್ರೀ ಕೆ. ಉಮೇಶ್ ಶೆಟ್ಟಿ | – 12,000/– | ಶ್ರೀ ಚಂದ್ರಶೇಖರ್ ಶೆಟ್ಟಿ ಎಂ | – 10,000/– |
| ಶ್ರೀ ವಿಜೇತ್ ಕುಮಾರ್ ಶೆಟ್ಟಿ | – 10,000/– | ಶ್ರೀ ಬಾಲಾಜಿ ಸೂಡ | – 10,000/– |
| ಮೆ॥ ಶೀಲಾ ಎಕ್ವಿಪ್‌ಮೆಂಟ್ಸ್ | –10,000/– | ಶ್ರೀ ರಮಿತ್ ಬಿ. ಶೆಟ್ಟಿ | – 10,000/– |
| ಶ್ರೀ ಬಿ.ಎನ್ ಶೆಟ್ಟಿ | – 10,000/– | ಶ್ರೀ ಉದಯ ಕುಮಾರ್ ಶೆಟ್ಟಿ | – 5001/– |
| ಶ್ರೀಮತಿ ಹರ್ಷಲತಾ ಬಾಲಕೃಷ್ಣ ಚೌಟ | –5001/– | ಶ್ರೀ ಪ್ರಕಾಶ್ಚಂದ್ರ ಹೆಗ್ಡೆ | – 5000/– |
| ಶ್ರೀ ವಿಠ್ಠಲ್ ಎಸ್. ರೈ | – 5000/– | ಶ್ರೀ ಅಶೋಕ್ ಕುಮಾರ್ ಶೆಟ್ಟಿ | – 5000/– |
| ಶ್ರೀ ನಾಗರಾಜ್ ರೈ. ಕೆ | – 5000/– | ಶ್ರೀ ಉಮೇಶ್ ಕುಮಾರ್ ಶೆಟ್ಟಿ | – 5000/– |
| ಶ್ರೀ ಎ. ದೇವಣ್ಣ ರೈ | – 5000/– | ಶ್ರೀ ಬಿ. ಆನಂದರಾಮ್ ಶೆಟ್ಟಿ | – 5000/– |
| ಶ್ರೀ ಶಂಕರ್ ಶೆಟ್ಟಿ | – 5000/– | ಶ್ರೀಮತಿ ಶಶಿರೇಖಾ ಶೆಟ್ಟಿ | – 2500/– |
| ಶ್ರೀ ಕೆ. ಅರವಿಂದ್ ಹೆಗ್ಡೆ | – 2100/– | ಕುಮಾರಿ ರಮ್ಯಾ ಶೆಟ್ಟಿ | – 2005/– |
| ಶ್ರೀ ಪ್ರದೀಪ್ ಶೆಟ್ಟಿ | – 2000/– | ಶ್ರೀ ರಾಧಾಕೃಷ್ಣ ಶೆಟ್ಟಿ | –2000/– |
| ಶ್ರೀಮತಿ ಸುಜಾತ ಎಸ್. ಶೆಟ್ಟಿ | – 2000/– | ಶ್ರೀಮತಿ ಅರುಣ | – 2000/– |
| ಶ್ರೀ ಉಮೇಶ್ ರೈ | – 1500/– | ಶ್ರೀಮತಿ ಭಾರತಿ ಜಯರಾಮ್ ಶೆಟ್ಟಿ | – 1500/– |
| ಶ್ರೀ ಅಜಿತ್ ಹೆಗ್ಡೆ | –1111/– | ಶ್ರೀಮತಿ ಮಾಲಿನಿ ಹೆಚ್. ಶೆಟ್ಟಿ | –1111/– |
| ಶ್ರೀಮತಿ ಭಾಗ್ಯಶ್ರೀ ಪಿ. ಶೆಟ್ಟಿ | – 1111/– | ಶ್ರೀಮತಿ ರೇಣುಕಾ ಆರ್. ಶೆಟ್ಟಿ | –1111/– |
| ಶ್ರೀಮತಿ ಅಂಕಿತ ಎನ್. | – 1001/– | ಶ್ರೀ ವಿರೂಪಾಕ್ಷ ಗೌಡ ಹೊಸಮನಿ | – 1000/– |
| ಶ್ರೀ ಆನಂದ್ ಶೆಟ್ಟಿ | – 505/– | ಶ್ರೀ ಕೆ. ನಾಗೇಂದ್ರ | –501/– |
| ಶ್ರೀಮತಿ ಗೀತಾ ವಿಶು ರೈ | – 501/– | | |

## ರಜತ ದ್ವಾರ ಮತ್ತು ಪಾಣಿಪೀಠ ನಿರ್ಮಿಸಲು ಬೆಳ್ಳಿ ನೀಡಿದ ದಾನಿಗಳು

| | | | |
|---|---|---|---|
| ಡಾ। ವೈ ಉಮನಾಥ ಶೆಟ್ಟಿ | –1520 ಗ್ರಾಂ | ಶ್ರೀ ಹರಿಪ್ರಸಾದ್ ಶೆಟ್ಟಿ | –600 ಗ್ರಾಂ |
| ಶ್ರೀ ಮುಲ್ಕಿ ನಾರಾಯಣ ಶೆಟ್ಟಿ | –1 ಕೆ.ಜಿ | ಶ್ರೀ ಸುನೀಲ್ | –250 ಗ್ರಾಂ |
| ಶ್ರೀ ಎಬಿ ಶೆಟ್ಟಿ | –1 ಕೆ.ಜಿ | ಶ್ರೀ ಪ್ರಶಾಂತ್ ಜಿ.ಎಲ್ | –250 ಗ್ರಾಂ |

**ರತ್ನಾಕರ ಶೆಟ್ಟಿ ಕಟ್ಕೇರೆ**
ಚೇರ್‌ಮೆನ್, ಪ್ರಾರ್ಥನ ಸಮಿತಿ

**ಭೋಜರಾಜ ಶೆಟ್ಟಿ ಕೊರ್ಗಿ**
ಸಂಚಾಲಕರು, ಪ್ರಾರ್ಥನಾ ಮಂದಿರ

ಇವರು ನಮ್ಮವರು

# ವೈದ್ಯಕೀಯ ಶಿಕ್ಷಣ ರಂಗದ ಧ್ರುವತಾರೆ – ಡಾ. ಎಸ್. ಚಂದ್ರಶೇಖರ ಶೆಟ್ಟಿ



**'ಬೆಳೆಯುವ ಕುಡಿಯನ್ನು ಮೊಳಕೆಯಲ್ಲೇ ನೋಡು' ಎಂಬಂತೆ, ವೈದ್ಯಕೀಯ ಶಿಕ್ಷಣ ರಂಗದಲ್ಲಿ ದೇಶಾದ್ಯಂತ ಮನೆಮಾತಾಗಿರುವ ಪ್ರೊ. ಡಾ. ಎಸ್ ಚಂದ್ರಶೇಖರ ಶೆಟ್ಟಿಯವರು, ಬಾಲ್ಯದಿಂದಲೇ ಬಹುಮುಖ ಪ್ರತಿಭೆ. ಉಡುಪಿ ಜಿಲ್ಲೆ ಕುಂದಾಪುರದಲ್ಲಿ 1943ರಲ್ಲಿ ಕುಂದಾಪುರದ ಮಾಜಿ ಶಾಸಕ ಕಾಪು ಸಂಜೀವ ಶೆಟ್ಟಿ ಕಾಳಾವರ ಮತ್ತು ಸುಣ್ಣಾರಿ ಪಾರ್ವತಿ ಶೆಟ್ಟಿಯವರ ಪುತ್ರರಾಗಿ ಜನಿಸಿದರು. ಆರಂಭ ದಿಂದಲೂ ವೈದ್ಯಕೀಯ ರಂಗದ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದ ಶೆಟ್ಟರು, ಸಮಾಜಸೇವೆಗೆ ವೈದ್ಯವೃತ್ತಿ ಅತ್ಯಂತ ಸೂಕ್ತ ಮಾರ್ಗ ಎಂಬ ಅಭಿಪ್ರಾಯ ಹೊಂದಿದ್ದರು. ಆದರೆ ವೃತ್ತಿ ಬದುಕಿನಲ್ಲಿ ತಾವು ವೈದ್ಯರಾಗಿ ಕಾರ್ಯನಿರ್ವಹಿಸಿದರೆ ಸಾಲದು; ತಮ್ಮಂಥ ಸಾವಿರಾರು ವೈದ್ಯರು ಸಮಾಜದಲ್ಲಿ ರೂಪುಗೊಳ್ಳಬೇಕು ಎಂಬ ದೃಷ್ಟಿಯಿಂದ ಅಧ್ಯಾಪಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡರು.**

ನೇತ್ರಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದ ಇವರು 1968ರಿಂದ 1999ರ ವರೆಗೆ ಅಧ್ಯಾಪನಾ ವೃತ್ತಿಯಲ್ಲಿ ತೊಡಗಿಸಿಕೊಂಡು ಅಪೂರ್ವ ಪ್ರಾಧ್ಯಾಪಕರು ಎನಿಸಿಕೊಂಡಿದ್ದರು. 1999ರಲ್ಲಿ ರಾಜೀವ್‌ಗಾಂಧಿ ವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಬಡ್ತಿ ಪಡೆದಾಗ, ವಿಶ್ವವಿದ್ಯಾನಿಲಯದ ಸರ್ವಾಂಗೀಣ ಪ್ರಗತಿಗೆ ಕಾರಣರಾದರು ಹಾಗೂ ಈ ವಿವಿ ವಿಶ್ವದ ಗಮನ ಸೆಳೆಯಲು ಕಾರಣಕರ್ತರಾದರು. 2007ರಲ್ಲಿ ಶ್ರೀ ದೇವರಾಜ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಕುಲಪತಿಗಳಾಗಿ ನಿಯುಕ್ತರಾದರು. ರಾಜೀವ್‌ಗಾಂಧಿ ಸಾರ್ವಜನಿಕ ಆರೋಗ್ಯ ಸಂಸ್ಥೆ ಮತ್ತು ರೋಗ ನಿಯಂತ್ರಣ ಕೇಂದ್ರದ ಸಲಹಾ ಸಮಿತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಫೌಂಡೇಷನ್‌ದ ಸೈಟ್ ಫಸ್ಟ್ ಯೋಜನೆಗೆ ಭಾರತ ಹಾಗೂ ಶ್ರೀಲಂಕಾ ದೇಶಗಳಿಗೆ ತಾಂತ್ರಿಕ ಸಲಹಾ ತಂಡದ ಮುಖ್ಯಸ್ಥರಾಗಿ, ರಾಷ್ಟ್ರೀಯ ಅಂಧತ್ವ ನಿಯಂತ್ರಣ ಯೋಜನೆಯ ಸಲಹೆಗಾರರಾಗಿಯೂ ಕಾರ್ಯಭಾರ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮುನ್ನ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಕುಲಪತಿಯಾಗಿ, ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯ ಉಪಾಧ್ಯಕ್ಷರಾಗಿ, ಬೆಂಗಳೂರು ಮಿಂಟೊ ಆಸ್ಪತ್ರೆಯ ಪ್ರಾದೇಶಿಕ ದೃಷ್ಟಿ ಸಂಸ್ಥೆಯ ನಿರ್ದೇಶಕರಾಗಿ, ಕೋಲಾರದ ದೇವರಾಜ ಅರಸ್ ವಿಶ್ವವಿದ್ಯಾನಿಲಯದ ಕುಲಪತಿಯಾಗಿಯೂ ಕಾರ್ಯ ನಿರ್ವಹಿಸಿದ್ದರು.

ನೇತ್ರಶಾಸ್ತ್ರದಲ್ಲಿ ಎಂ.ಎಸ್.ಪದವಿ ಪಡೆದ ಬಳಿಕ, ವಿಟ್ರಿಯೊ– ರೆಟಿನಲ್ ಸರ್ಜರಿ ವಿಭಾಗದ ತರಬೇತಿಗಾಗಿ ವಿಶ್ವ ಆರೋಗ್ಯ ಸಂಸ್ಥೆಯ ಫೆಲೋಶಿಪ್ ಪಡೆದರು. ಲಂಡನ್‌ನ ಮೂರ್‌ಫೀಲ್ಡ್ ಕಣ್ಣಿನ ಆಸ್ಪತ್ರೆಯಲ್ಲಿ ವಿಶೇಷ ತರಬೇತಿ ಪಡೆದರು. ಬಳಿಕ ಚಿಕಾಗೋದ ಐ ಅಂಡ್ ಇಯರ್ ಇನ್‌ಫರ್ಮರಿ, ಸಿಡ್ನಿ ಕಣ್ಣಿನ ಆಸ್ಪತ್ರೆ ಮತ್ತು ಮೆಲ್ಬೋರ್ನ್‌ನ ಐ ಅಂಡ್ ಇಯರ್ ಇನ್‌ಫರ್ಮರಿಯಲ್ಲಿ ಅಲ್ಪಾವಧಿ ತರಬೇತಿ ಪಡೆದರು. ಹುಬ್ಬಳ್ಳಿ, ಮೈಸೂರು ಹಾಗೂ ಬೆಂಗಳೂರಿನಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಬೋಧಕರಾಗಿಯೂ ಕಾರ್ಯ ನಿರ್ವಹಿಸಿದರು.

**ಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್‌ನ ಸೈಟ್ ಫಸ್ಟ್ ಕಾರ್ಯಕ್ರಮದ ತಾಂತ್ರಿಕ ಸಲಹೆಗಾರರಾಗಿ ದಕ್ಷಿಣ ಭಾರತ ಹಾಗೂ ಶ್ರೀಲಂಕಾದಲ್ಲಿ 1991ರಿಂದ 100ಕ್ಕೂ ಹೆಚ್ಚು ಕಣ್ಣು ಆರೋಗ್ಯ ಯೋಜನೆಗಳ ಅಭಿವೃದ್ಧಿಗೆ ಕಾರಣರಾದರು. ಸುಮಾರು 21 ದಶಲಕ್ಷ ಡಾಲರ್ ಮೌಲ್ಯದ ಯೋಜನೆಗಳನ್ನು ಈ ಭಾಗಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಸುಮಾರು ಐದು ಲಕ್ಷಕ್ಕೂ ಅಧಿಕ ಉಚಿತ ಕಣ್ಣುಪೊರೆ ಶಸ್ತ್ರಚಿಕಿತ್ಸೆಗಳನ್ನು ದಕ್ಷಿಣ ಭಾರತ ಹಾಗೂ ಶ್ರೀಲಂಕಾದ ಬಡವರಿಗೆ ಉಚಿತವಾಗಿ ಮಾಡಲು ಕಾರಣಕರ್ತರಾದರು.**

**ಪ್ರಸ್ತುತ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಡಾ. ಎಸ್. ಚಂದ್ರಶೇಖರ ಶೆಟ್ಟಿ ಸೇವೆ ಸಲ್ಲಿಸುತ್ತಿದ್ದಾರೆ. ನ್ಯಾಕ್ ಪೀರ್ ಸಮಿತಿಯ ಅಧ್ಯಕ್ಷರಾಗಿ, ನಿಟ್ಟೆ ಮತ್ತು ಮೈಸೂರು ಜೆಎಸ್‌ಎಸ್ ಸ್ವಾಯುತ್ತ ವಿಶ್ವವಿದ್ಯಾನಿಲಯಗಳ ಆಡಳಿತ ಮಂಡಳಿ ಸದಸ್ಯರಾಗಿ, ಕರ್ನಾಟಕ ರಾಜ್ಯ ಅಂಧತ್ವ ನಿಯಂತ್ರಣ ಸಂಸ್ಥೆಯ ಗೌರವ ಸಲಹೆಗಾರರಾಗಿ, ಏಷ್ಯಾ ಹಾರ್ಟ್ ಫೌಂಡೇಷನ್ ಮತ್ತು ನಾರಾಯಣ ಹೃದಯಾಲಯ ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದ್ದಾರೆ.**

ಬೆಂಗಳೂರು ವಿವಿ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಪರಿಶೋಧನೆ ಸಮಿತಿ ಅಧ್ಯಕ್ಷರಾಗಿ, ರಾಜೀವ್‌ಗಾಂಧಿ ಆರೋಗ್ಯ ವಿವಿ ಕಾಯ್ದೆಯ ಪರಾಮರ್ಶನಾ ಸಮಿತಿ ಅಧ್ಯಕ್ಷರಾಗಿ, ಕರ್ನಾಟಕದಲ್ಲಿ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಶುಲ್ಕ ನಿಗದಿ ಸಮಿತಿ ಅಧ್ಯಕ್ಷರಾಗಿ, ಭಾರತೀಯ ವೈದ್ಯಕೀಯ ಮಂಡಳಿ ಸದಸ್ಯರಾಗಿ, ಮಣಿಪಾಲ ವಿವಿ, ಬೆಳಗಾವಿಯ ಕೆಎಲ್‌ಇ ವಿವಿ, ಚೆನ್ನೈ ಮೀನಾಕ್ಷಿ ವಿವಿ, ತುಮಕೂರಿನ ಸಿದ್ಧಾರ್ಥ ವಿವಿ ಆಡಳಿತ ಮಂಡಳಿಗಳ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. 45ಕ್ಕೂ ಹೆಚ್ಚು ವೈಜ್ಞಾನಿಕ ಪ್ರಸ್ತುತಿಯನ್ನು ವಿವಿಧ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ನೀಡಿದ್ದು, ಐದು ಸಂಶೋಧನಾ ಲೇಖಗಳನ್ನೂ ಪ್ರಕಟಿಸಿದ್ದಾರೆ. ದೃಷ್ಟಿಶಾಸ್ತ್ರದಲ್ಲಿ ಸ್ನಾತಕೋತ್ತರ ಕೋರ್ಸ್, ಪಿಎಚ್‌ಡಿ ಹಾಗೂ ಸಂಶೋಧನಾ ಯೋಜನೆಗಳಿಗೆ ಮಾರ್ಗದರ್ಶಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

ಬೆಂಗಳೂರು ಬಂಟರ ಸಂಘದ ಹಿರಿಯ ಸದಸ್ಯರಾದ ಇವರು ಕಳೆದ 20 ವರ್ಷಗಳಿಂದ ಬಂಟರ ಸಂಘ ಆರ್‌ಎನ್‌ಎಸ್ ವಿದ್ಯಾನಿಕೇತನದ ಗವರ್ನಿಂಗ್ ಕೌನ್ಸಿಲ್‌ನ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಸಂಘದ ಶಾಲೆಯು ಪ್ರತಿಷ್ಠಿತ ವಿದ್ಯಾಸಂಸ್ಥೆಯಾಗಿ ರೂಪುಗೊಂಡಿದೆ. ಇಂದು ಶಾಲೆಯ ವಿದ್ಯಾರ್ಥಿಗಳ ಉತ್ಕೃಷ್ಟ ಶೈಕ್ಷಣಿಕ ಸಾಧನೆಯ ಹಿಂದೆ ಶೆಟ್ಟರ ಅಪಾರ ಪರಿಶ್ರಮವಿದೆ.

ವಿದ್ಯಾರ್ಥಿ ದೆಸೆಯಿಂದಲೇ ಉತ್ತಮ ಕ್ರೀಡಾಪಟುವೂ ಆಗಿರುವ ಇವರು, 1964 ಹಾಗೂ 66ರಲ್ಲಿ ಮೈಸೂರು ವಿವಿಯನ್ನು ಶಟ್ಲ್ ಬ್ಯಾಡ್ಮಿಂಟನ್‌ನಲ್ಲಿ ಪ್ರತಿನಿಧಿಸಿದ್ದರು. 1975ರಲ್ಲಿ ಕರ್ನಾಟಕ ವಿವಿ ಶಿಕ್ಷಕರ ಟೆನಿಸ್ ತಂಡದಲ್ಲೂ ಸ್ಥಾನ ಪಡೆದಿದ್ದರು. ಬಿಡುವಿಲ್ಲದ ವೃತ್ತಿಕಾರ್ಯಗಳ ನಡುವೆಯೂ ಸಮಾಜ ಸೇವಾ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಅವರು, ಬೆಂಗಳೂರು ಉತ್ತರ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ, ಐಎಂಎ, ಅಖಿಲ ಭಾರತದ ದೃಷ್ಟಿ ಸೊಸೈಟಿ, ಕರ್ನಾಟಕ ನೇತ್ರಶಾಸ್ತ್ರ ಸೊಸೈಟಿ, ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಆಜೀವ ಸದಸ್ಯರಾಗಿ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಅತ್ತಾವರ ವಿನಯಾ ಶೆಟ್ಟಿಯವರನ್ನು ವಿವಾಹವಾಗಿ ಪುತ್ರ ಸತ್ಯಜೀತ್ ಶೆಟ್ಟಿ, ಸೊಸೆ ಸೌಮ್ಯಾ ಮೊಮ್ಮಗಳು ಏಕಾ ಹಾಗೂ ಮತ್ತೊಬ್ಬ ಪುತ್ರ ಸಿದ್ಧಾರ್ಥ ಶೆಟ್ಟಿಯವರೊಂದಿಗೆ ತುಂಬು ಕುಟುಂಬ ಜೀವನ ನಡೆಸುತ್ತಿದ್ದಾರೆ.

**ಇವರ ಸಾಧನೆಗಳನ್ನು ಅರಸಿಕೊಂಡು ಹಲವು ಪ್ರಶಸ್ತಿ ಪುರಸ್ಕಾರಗಳು ಬಂದಿವೆ. ಅವುಗಳಲ್ಲಿ ಬರಹೈನ್ ಬಂಟರ ಸಂಘ ಪ್ರಶಸ್ತಿ, ಬೆಂಗಳೂರು ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳ ಸಂಘದ ಪ್ರಶಸ್ತಿ, ಶಿವಮೊಗ್ಗ ಭಾರತೀಯ ವೈದ್ಯಕೀಯ ಸಂಘದ ಪ್ರಶಸ್ತಿ, ಲೇಕ್‌ಸೈಡ್ ಎಜ್ಯುಕೇಶನ್ ಟ್ರಸ್ಟ್‌ನ ಸಿಎಂಇ ಪ್ರಶಸ್ತಿ, ಬೆಳಗಾವಿಯ ಮಾನವ ಚಾರಿಟೀಸ್‌ನಿಂದ ಮಾನವ ರತ್ನ ಪ್ರಶಸ್ತಿ, ಮೂಡುಬಿದರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದಿಂದ ಗೌರವ ಪ್ರಶಸ್ತಿ, ಮೈಸೂರು ವೈದ್ಯಕೀಯ ಕಾಲೇಜು ಹಳೆ ವಿದ್ಯಾರ್ಥಿಗಳ ಸಂಘದಿಂದ**

**ವೈದ್ಯರ ದಿನ ಪ್ರಶಸ್ತಿ, 76ನೇ ಮೆಡಿಕಾನ್ ಪ್ರಶಸ್ತಿ ಪ್ರಮುಖವಾದವುಗಳು. ಶೆಟ್ಟರು ಸಮಾಜಕ್ಕೆ ನೀಡಿದ ಅನುಪಮ ಸೇವೆಯನ್ನು ಪರಿಗಣಿಸಿ ಬೆಂಗಳೂರು ಬಂಟರ ಸಂಘವು ಬಿಸು ಆಚರಣೆಯ ಸಂದರ್ಭದಲ್ಲಿ ಗೌರವ ಸನ್ಮಾನ ನೀಡಿದೆ.**

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ ಇವರಿಗೆ ವಿಜ್ಞಾನ ವಿಷಯದಲ್ಲಿ ಗೌರವ ಡಾಕ್ಟರೇಟ್ ನೀಡಿದೆ. ಅಂತೆಯೇ ಉಕ್ರೇನ್‌ನ ಒಡೆಸ್ಸಾ ರಾಜ್ಯ ವೈದ್ಯಕೀಯ ವಿಶ್ವವಿದ್ಯಾನಿಲಯ ಇವರಿಗೆ ವೈದ್ಯಕೀಯ ಶಿಕ್ಷಣ ಮತ್ತು ಸಮುದಾಯ ದೃಷ್ಟಿಶಾಸ್ತ್ರಕ್ಕೆ ಸಲ್ಲಿಸಿದ ಸೇವೆಗಾಗಿ ಗೌರವ ಡಾಕ್ಟರೇಟ್ ನೀಡಿದೆ. ಹಲವು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಪುರಸ್ಕಾರ, ಪ್ರಶಸ್ತಿ ಹಾಗೂ ಗೌರವಗಳಿಗೆ ಇವರು ಪಾತ್ರರಾಗಿದ್ದಾರೆ.

"ಆಡು ಮುಟ್ಟದ ಸೊಪ್ಪಿಲ್ಲ" ಎಂಬಂತೆ ಶೆಟ್ಟರು ಕಾರ್ಯ ನಿರ್ವಹಿಸದ ಕ್ಷೇತ್ರವಿಲ್ಲ. ಜತೆಗೆ ಯಾವ ಕ್ಷೇತ್ರದಲ್ಲಿ ಆದರೂ, ತಮ್ಮದೇ ವಿಶಿಷ್ಟ ಛಾಪು ಮೂಡಿಸುವ ಜಾಣ್ಮೆ ಇವರದ್ದು. ಸರಳ– ಸಜ್ಜನಿಕೆಯ ವ್ಯಕ್ತಿತ್ವಕ್ಕೆ ಹೆಸರಾದ ಶೆಟ್ಟರು, ಇಡೀ ಸಮುದಾಯಕ್ಕೆ ಆದರ್ಶಪ್ರಾಯರೆನಿಸಿಕೊಂಡವರು. ಇಂದಿನ ಯುವ ಪೀಳಿಗೆಗೆ ಸ್ಫೂರ್ತಿಯ ಚಿಲುಮೆ ಹಾಗೂ ಪ್ರೇರಕ ಶಕ್ತಿ.

**● ರವಿರಾಜ್ ಎಸ್. ಶೆಟ್ಟಿ**

### ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ 4ನೇ ರ್‍ಯಾಂಕ್ ಪಡೆದ

## ಕೃತಿ ಡಿ. ಶೆಟ್ಟಿ



2017–18ನೇ ಸಾಲಿನ ಪಿ.ಯು.ಸಿ ವಿಜ್ಞಾನ ವಿಭಾಗದಲ್ಲಿ 593/600 ಅಂಕಗಳಿಸಿ (ಪಿ.ಸಿ.ಎಮ್.ಸಿ) ರಾಜ್ಯಕ್ಕೆ ನಾಲ್ಕನೇ ರ್‍ಯಾಂಕ್ ಗಳಿಸಿರುವ ಕೃತಿ ಡಿ. ಶೆಟ್ಟಿ ಇವರು ಕೋಡಿಕನ್ಯಾನದ ಸರಕಾರಿ ಪ್ರೌಢ ಶಾಲೆಯಲ್ಲಿ ದೈಹಿಕ ಶಿಕ್ಷಕರಾಗಿರುವ ಶ್ರೀ ಬಿಲ್ಲಾಡಿ ದಿನಕರ ಶೆಟ್ಟಿ ಹಾಗೂ ಶಿರೂರು ಹೊಳೆಬಾಗಿಲು ದುರ್ಗಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಅಧ್ಯಾಪಕಿ ಶ್ರೀಮತಿ ಅನಿತಾ ಡಿ. ಶೆಟ್ಟಿಯವರ ಸುಪುತ್ರಿ. ಉಡುಪಿಯ ಪೂರ್ಣಪ್ರಜ್ಞಾ ಪದವಿ ಪೂರ್ವ ಕಾಲೇಜಿನಲ್ಲಿ ವ್ಯಾಸಂಗ ನಡೆಸಿರುವ ಇವರು ಮುಂದೆ ಸಾಫ್ಟ್‌ವೇರ್ ಇಂಜಿನಿಯರ್ ಆಗುವ ಗುರಿ ಹೊಂದಿದ್ದಾರೆ. ಈ ಉನ್ನತ ಸಾಧನೆಗೆ ಬಂಟರ ಸಂಘವು ಇವರನ್ನು ಹಾರ್ದಿಕವಾಗಿ ಅಭಿನಂದಿಸುವುದರೊಂದಿಗೆ ಇವರಿಗೆ ಉಜ್ವಲ ಭವಿಷ್ಯವನ್ನು ಹಾರೈಸುತ್ತದೆ.

## ನೀವೂ ಬರೆಯಿರಿ!

**ಉದಯೋನ್ಮುಖ ಹಾಗೂ ಯುವ ಬರಹಗಾರರಿಂದ ಕಥೆ–ಕವನ, ಲೇಖನ, ಹಾಸ್ಯಬರಹ, ಚುಟುಕುಗಳನ್ನು ಆಹ್ವಾನಿಸುತ್ತಿದ್ದೇವೆ. ತಮ್ಮ ಬರಹಗಳನ್ನು 'ಸ್ನೇಹಚಿಂತನ'ದ ಸಂಪಾದಕರಿಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಟೈಪ್ ಮಾಡಿ (ಒಂದು ಪುಟಕ್ಕೆ ಮೀರದಂತೆ) ಸಂಘದ ಇಮ್ಮೈಲ್: info@buntsanghablr.com ಗೆ ಅಥವಾ ಮುದ್ರಿಸಿ ಸಂಘದ ಕಛೇರಿಗೆ ಪ್ರತೀ ತಿಂಗಳ 20ನೇ ತಾರೀಕಿನ ಒಳಗಾಗಿ ಕಳುಹಿಸಬಹುದಾಗಿದೆ.**

# ದೇಶದಲ್ಲಿ ಅಪಘಾತಗಳನ್ನು ನಿಯಂತ್ರಿಸಲು ವಾಹನಗಳಲ್ಲಿ ಏಕರೂಪದ ನಂಬರ್ ಪ್ಲೇಟ್‌ಗಳ ಅಗತ್ಯತೆ



**ಬಾಲಕೃಷ್ಣ ಶೆಟ್ಟಿ (ಎಬಿ)**
ಮಾಜಿ ಸದಸ್ಯ
ಖಾಯಂ ಜನತಾ ನ್ಯಾಯಾಲಯ ಬೆಂಗಳೂರು

ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ವಾಹನಗಳ ಹಿಟ್ ಅಂಡ್ ರನ್ ಪ್ರಕರಣಗಳು ಭಾರೀ ಪ್ರಮಾಣದಲ್ಲಿ ಹೆಚ್ಚುತ್ತಿವೆ. ಬೆಂಗಳೂರು ನಗರದಲ್ಲಂತೂ ಇದು ಸುದ್ದಿಯೇ ಅಲ್ಲವೆನ್ನುವ ರೀತಿಯಲ್ಲಿ ನಡೆಯುತ್ತಿದೆ. ಬಹುತೇಕ ಪ್ರಕರಣಗಳಲ್ಲಿ ನಕಲಿ ನಂಬರ್ ಪ್ಲೇಟ್‌ಗಳು, ಫ್ಯಾನ್ಸಿ ನಂಬರ್ ಪ್ಲೇಟ್‌ಗಳು, ವಿರೂಪಗೊಂಡ ನಂಬರ್ ಪ್ಲೇಟ್‌ಗಳಿಂದಾಗಿ ಅಪರಾಧಿಗಳನ್ನು ಹಿಡಿದು ಶಿಕ್ಷಿಸುವುದು ಪೋಲಿಸರಿಗೆ ಕಷ್ಟವಾಗಿತ್ತಿದೆ. ಕೆಲವು ಸಂಘಟನೆಗಳ ಮುಖ್ಯಸ್ಥರು ಮತ್ತು ಕಾರ್ಯಕರ್ತರು ತಮ್ಮ ವಾಹನಗಳ ನಂಬರ್ ಪ್ಲೇಟ್‌ಗಳ ಮೇಲೆ ತಮ್ಮ ಸಂಘಟನೆಗಳ ಹೆಸರು, ಹುದ್ದೆಗಳ ಹೆಸರು ಮತ್ತು ಲಾಂಛನಗಳನ್ನು ಹಾಕಿಕೊಳ್ಳುತ್ತಾರೆ. ಹಾಗೆಯೇ ವಾಹನದ ಮುಂದೆ ಮತ್ತು ಹಿಂದೆ ತಮ್ಮ ಸಂಘಟನೆಯ ಧ್ವಜಗಳನ್ನೂ ಹಾಕಿಕೊಳ್ಳುತ್ತಾರೆ. ಕೆಲವು ಟ್ಯಾಕ್ಸಿಗಳಲ್ಲಿ ನಂಬರ್ ಪ್ಲೇಟ್ ಅಳವಡಿಸಬೇಕಾದ ಸ್ಥಳದಲ್ಲಿ ಬೇರೇನೋ ಬರೆಸಿಕೊಳ್ಳುತ್ತಾರೆ. ಕೆಲವು ವಾಹನಗಳಲ್ಲಿ ಕಿತ್ತು ಹೋದ ನಂಬರ್ ಪ್ಲೇಟ್‌ಗಳು ಇದ್ದರೆ, ಕೆಲವು ವಾಹನಗಳಿಗೆ ನಂಬರ್ ಪ್ಲೇಟ್‌ಗಳೇ ಇರುವುದಿಲ್ಲ. ಹಾಗೆಯೇ ಅವುಗಳ ಸಂಗಡ ರೇಡಿಯಂ ಸ್ಟಿಕರ್‌ಗಳ ಮೂಲಕ ಚಿತ್ರ ವಿಚಿತ್ರ ಹೆಸರುಗಳನ್ನು ಮತ್ತು ಘೋಷಣ ವಾಕ್ಯಗಳನ್ನು ಬರೆಸುತ್ತಾರೆ. ಬೆಂಗಳೂರು ನಗರದಲ್ಲಿ ಸುಮಾರು 50% ಕ್ಕೂ ಹೆಚ್ಚಿನ ವಾಹನಗಳಿಗೆ ದೋಷಪೂರಿತ ನಂಬರ್ ಪ್ಲೇಟ್‌ಗಳು ಇವೆ. ಕಳೆದ ಆರು ತಿಂಗಳಿನಲ್ಲಿ ಸಾರಿಗೆ ಅಧಿಕಾರಿಗಳು ಸುಮಾರು 36000 ಪ್ರಕರಣಗಳನ್ನು ದಾಖಲು ಮಾಡಿದ್ದು, ಅವುಗಳಲ್ಲಿ 26039 ಪ್ರಕರಣಗಳು ದ್ವಿಚಕ್ರವಾಹನಗಳಿಗೆ ಸಂಬಂಧಿಸಿದ್ದು. 2016 ಮತ್ತು 2017ರಲ್ಲಿ ಬೆಂಗಳೂರು ನಗರ ಒಂದರಲ್ಲಿಯೇ 90 ಲಕ್ಷ ಸಾರಿಗೆ ನಿಯಮ ಉಲ್ಲಂಘನೆ ಪ್ರಕರಣಗಳು ದಾಖಲೆಯಾಗಿದ್ದು, ದೋಷ ಪೂರಿತ ನಂಬರ್ ಪ್ಲೇಟ್ ನಿಟ್ಟಿನಲ್ಲಿ ಕ್ರಮವಾಗಿ 62785 ಮತ್ತು 2.44 ಲಕ್ಷ ಪ್ರಕರಣಗಳು ಇವೆ. ಈ ವರ್ಷ ಮೊದಲು ಮೂರು ತಿಂಗಳಿನಲ್ಲಿ 1.23 ಲಕ್ಷ ಇಂಥಹ ಪ್ರಕರಣಗಳು ದಾಖಲಾಗಿವೆ. ಈ ರೀತಿಯಲ್ಲಿ ಉಲ್ಲಂಘನೆಗೆ ದಂಡದ ಮೊತ್ತ ತೀರಾ ಕಡಿಮೆಯಾಗಿದೆ. ಈ ಪ್ರಕರಣಗಳು ಹೆಚ್ಚಾಗಲು ಕಾರಣವೆಂದು ಸಾರಿಗೆ ಇಲಾಖೆ ಅಭಿಪ್ರಾಯ ವ್ಯಕ್ತ ಮಾಡುತ್ತಿದೆ. ಅಪಘಾತ ಅಥವಾ ಅವಘಡಗಳು ಸಂಭವಿಸಿದರೆ, ಸಾರಿಗೆ ಅಧಿಕಾರಿಗಳು ತಪ್ಪಿತಸ್ತರ ವಿರುದ್ಧ ಕ್ರಮ ತೆಗೆದುಕೊಳ್ಳಲು ಕಷ್ಟಪಡಬೇಕಾಗುತ್ತದೆ ಮತ್ತು ಕೆಲವು ಕಾನೂನು ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವ ದುಷ್ಕರ್ಮಿಗಳು ಮತ್ತು ಸಮಾಜ ದ್ರೋಹಿಗಳು ಇಂಥಹ ನಂಬರ್ ಪ್ಲೇಟ್‌ಗಳನ್ನು ಬಳಸಿಕೊಂಡು ಅಪರಾಧಗಳನ್ನು ಎಸಗುವುದು ರಹಸ್ಯವೇನಲ್ಲ. ಇಂತಹ ವಾಹನಗಳನ್ನು ಸಿಸಿ ಟಿವಿ ದೃಶ್ಯಾವಳಿಗಳಲ್ಲಿ ಅಥವಾ ನೇರವಾಗಿಯೂ ಗುರುತು ಹಚ್ಚುವುದು ಕಷ್ಟ. ನಂಬರ್ ಪ್ಲೇಟ್ ಮೇಲ್ಭಾಗದಲ್ಲಿ ಸಂಬಂಧಪಟ್ಟ ಆಧಿಕಾರಿಯ ಹುದ್ದೆ ಮತ್ತು ಇಲಾಖೆಯ ಹೆಸರನ್ನು ಬರೆಯಲು ಕೆಲವು ನಿಶ್ಚಿತ ಇಲಾಖೆ ಮತ್ತು ಅಧಿಕಾರಿಗಳಿಗೆ ಮಾತ್ರ ನಿಯಮಾವಳಿಯ ಪ್ರಕಾರ ಅವಕಾಶ ಇರುತ್ತದೆ.

ಖಾಸಗಿ ವಾಹನಗಳಿಗೆ ಬಿಳಿ ಬಣ್ಣದ ಪ್ಲೇಟ್ ಮೇಲೆ ಕಪ್ಪು ಬಣ್ಣದ ಸಂಖ್ಯೆಗಳಲ್ಲಿ ಮತ್ತು ಸಾರ್ವಜನಿಕ ವಾಹನಗಳಲ್ಲಿ ವಾಣಿಜ್ಯ ಉದ್ದೇಶಕ್ಕೆ ಇರುವ ವಾಹನಗಳಲ್ಲಿ ನಂಬರಿಂಗ್ ಸಿಸ್ಟಮ್ ಇದಕ್ಕೆ ತದ್ವಿರುದ್ಧ ಇರಬೇಕು ಎನ್ನುವ ನಿಯಾಮಾವಳಿ ಇರುತ್ತದೆ. ಬಾಡಿಗೆ ಕಾರುಗಳಿಗೆ ಹಳದಿ ಪ್ಲೇಟ್ ಮೇಲೆ ಕಪ್ಪು ಸಂಖ್ಯೆಯಲ್ಲಿ ಬರೆಯಲಾಗುತ್ತದೆ. ನಂಬರ್ ಪ್ಲೇಟ್‌ಗಳು ಇಂಗ್ಲೀಷ್‌ನಲ್ಲಿ ಇರಬೇಕು ಮತ್ತು ಅಂಕಿಗಳು ಅರೇಬಿಕ್ ಭಾಷೆಯಲ್ಲಿ ಇರಬೇಕು. ಕರ್ನಾಟಕದಲ್ಲಿ ನಂಬರ್‌ಗಳು 'ಕೆಎ' ದಿಂದ ಶುರುವಾಗಿ ಸಂಬಂಧಪಟ್ಟ ಸಾರಿಗೆ ಕಚೇರಿಯ ನಂಬರ್ ಮೂಲಕ ವಾಹನದ ನಂಬರ್ ಬರುವಂತೆ ಬರೆಯಲಾಗುತ್ತದೆ. ಉದಾಹರಣೆಗೆ ಕೆಎ 05 2269 ಎಂದರೆ ಕರ್ನಾಟಕದ, ಜಯನಗರ ಸಾರಿಗೆ ಕಚೇರಿಯಲ್ಲಿ ನೊಂದಣಿಯಾದ ವಾಹನದ ನಂಬರ್ 2269 ಎಂದು. ಈ ನಂಬರ್ ಪ್ಲೇಟ್‌ಗಳು ಕನಿಷ್ಟ ಐದು ವರ್ಷಗಳು ಬಳಕೆಯಲ್ಲಿರಬೇಕೆನ್ನುವ ಅಂದಾಜು ಇರುತ್ತದೆ. ಅದೇ ರೀತಿ ಮಿಲಿಟರಿ ಡಿಪ್ಲೋಮ್ಯಾಟ್ ಕಾರುಗಳ ಮೇಲೆ

ನೊಂದಣಿ ನಂಬರ್ ಬರೆಯುವ ವೈಖರಿ ಸಂಪೂರ್ಣವಾಗಿ ಬೇರೆಯದಾಗಿರುತ್ತದೆ. ಯಾವ ವಾಹನಗಳಿಗೆ ಯಾವ ರೀತಿಯ ನಂಬರ್ ಪ್ಲೇಟ್ ಅಳವಡಿಸಬೇಕು, ನಂಬರ್ ಪ್ಲೇಟ್‌ನಲ್ಲಿ ಯಾವ ಬಣ್ಣದ ಹಿನ್ನೆಲೆಯಲ್ಲಿ ಯಾವ ಬಣ್ಣದ ಸಂಖ್ಯೆಗಳನ್ನು ನಮೂದಿಸಬೇಕು ಎನ್ನುವುದರ ಬಗೆಗೆ ವಿಸ್ತೃತವಾದ ನಿಯಮಾವಳಿಗಳು ಇವೆ. ಹಾಗೆಯೇ ವಾಹನಗಳ ಮುಂಭಾಗದಲ್ಲಿ ಮತ್ತು ಹಿಂಭಾಗದಲ್ಲಿ ಯಾವ ರೀತಿ ಅಳವಡಿಸಬೇಕು ಎನ್ನುವುದರ ಬಗೆಗೂ ನೀತಿ ನಿಯಮಾವಳಿಗಳು ಇವೆ. ಹಿಂದಿನ ಪ್ಲೇಟ್ ಮತ್ತು ಮುಂದಿನ ಪ್ಲೇಟ್‌ಗಳು ಹೇಗಿರಬೇಕು, ನಾಲ್ಕು ಚಕ್ರ, ದ್ವಿಚಕ್ರಗಳಿಗೆ ಹೇಗಿರಬೇಕು, ಎಷ್ಟು ಎತ್ತರ, ಅಂಕಿಗಳ ದಪ್ಪ ಎಷ್ಟಿರಬೇಕು, ಎರಡು ಅಂಕಿಗಳ ಮಧ್ಯೆ ಎಷ್ಟು ಅಂತರ ಇರಬೇಕು ಮುಂತಾದ ವಿವರಗಳು ವಿಸ್ತೃತವಾಗಿರುತ್ತದೆ. ಮೋಟಾರ್ ಸೈಕಲ್‌ಗಳ ಮುಂಭಾಗದಲ್ಲಿ ಹ್ಯಾಂಡಲ್ ಬಾರ್‌ಗೆ ಮತ್ತು ಹಿಂಭಾಗದಲ್ಲಿ ಮಡ್‌ಗಾರ್ಡ್‌ಗೆ ಹೇಗೆ ನಂಬರ್ ಪ್ಲೇಟ್‌ಗಳನ್ನು ಅಳವಡಿಸಿಕೊಳ್ಳಬೇಕು ಎನ್ನುವುದರ ಬಗೆಗೆ ಕೂಡಾ ಮಾನದಂಡವಿದೆ. ಫ್ಯಾನ್ಸಿ ನಂಬರ್‌ಗಳು ದುಬಾರಿಯಾಗಿದ್ದು, ದ್ವಿ ಚಕ್ರ ಮತ್ತು ನಾಲ್ಕು ಚಕ್ರ ವಾಹನಗಳಿಗೆ ಕ್ರಮವಾಗಿ 300–2000 ಮತ್ತು 500–5000ರ ವರೆಗೆ ಇರುತ್ತದೆ. ಆದರೂ ಇದಕ್ಕೆ ಬೇಡಿಕೆ ಇದ್ದು ಸುಮಾರು 1000 ವಿವಿಧ ರೀತಿಯ ವಿನ್ಯಾಸಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ.

**ನಂಬರ್ ಪ್ಲೇಟ್‌ಗಳು ಯಾವ ರೀತಿ ಇರಬೇಕು**

| ವಾಹನಗಳು | ನಂಬರ್ ಪ್ಲೇಟ್ ಎತ್ತರ ಮಿ.ಮಿ.ನಲ್ಲಿ | ನಂಬರ್ ಪ್ಲೇಟ್ ದಪ್ಪ ಮಿ.ಮಿ.ನಲ್ಲಿ | ಎರಡು ಅಂಕಿಗಳ ಮಧ್ಯ ಅಂತರ |
|---|---|---|---|
| ನಾಲ್ಕು ಚಕ್ರ ವಾಹನಗಳು | 65 | 10 | 10 |
| ಮೊಪೆಡ್ / ಸ್ಕೂಟರ್ | 15 | 2.50 | 2.50 |
| ಬೈಕ್ / ಆಟೋ | 30 | 5 | 4.00 |

**ಹಿಂದಿನ ನಂಬರ್ ಪ್ಲೇಟ್**

| ವಾಹನಗಳು | ನಂಬರ್ ಪ್ಲೇಟ್ ಎತ್ತರ ಮಿ.ಮಿ.ನಲ್ಲಿ | ನಂಬರ್ ಪ್ಲೇಟ್ ದಪ್ಪ ಮಿ.ಮಿ.ನಲ್ಲಿ | ಎರಡು ಅಂಕಿಗಳ ಮಧ್ಯ ಅಂತರ |
|---|---|---|---|
| ನಾಲ್ಕು ಚಕ್ರ ವಾಹನಗಳು | 65 | 10 | 10 |
| ಮೊಪೆಡ್ / ಸ್ಕೂಟರ್ | 40 | 7 | 5 |
| ಬೈಕ್ / ಆಟೋ | 40 | 7 | 5 |

ವಾಹನಗಳಲ್ಲಿ ಭದ್ರತೆಯ ನಂಬರ್ ಪ್ಲೇಟ್‌ಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ವರ್ಷಗಳ ಹಿಂದೆ ಆದೇಶಿಸಿದ್ದರೂ, ಯಾವ ರಾಜ್ಯವೂ ಈ ನಿಟ್ಟಿನಲ್ಲಿ ಗಂಭೀರ ಕ್ರಮ ತೆಗೆದುಕೊಂಡಿಲ್ಲ. ಕೇವಲ ದೋಷಪೂರಿತ ನಂಬರ್ ಪ್ಲೇಟ್ ವಿರುದ್ಧ ಮಾತ್ರ ಕ್ರಮ ತೆಗೆದುಕೊಳ್ಳುತ್ತಿದ್ದು, ತಪ್ಪಿತಸ್ತ ವಾಹನ ಚಾಲಕರಿಗೆ ದಂಡ ಹಾಕಿ ಚುರುಕು ಮುಟ್ಟಿಸುತ್ತಿವೆ. ಕೆಲವು ವರ್ಷಗಳಿಂದ ಲೇಖಕರು ಈ ನಿಟ್ಟಿನಲ್ಲಿ ಸಂಬಂಧಪಟ್ಟ ಸರ್ಕಾರ ಹಾಗೂ ಅಧಿಕಾರಿಗಳೊಂದಿಗೆ ನಿರಂತರವಾಗಿ ಚರ್ಚೆಯಲ್ಲಿದ್ದು, ಬೇರೆ ಬೇರೆ ವೇದಿಕೆಯಲ್ಲಿ ಈ ವಿಷಯ ನಿರಂತರವಾಗಿ ಪ್ರಸ್ತಾಪ ಮಾಡುತ್ತಿದ್ದಾರೆ. ಕೇಂದ್ರ ಸರಕಾರ ದೇಶಾದ್ಯಂತ ಏಕರೂಪ ನಂಬರ್ ಪ್ಲೇಟ್ ಅಳವಡಿಸುವ ನಿಟ್ಟಿನಲ್ಲಿ ಗಂಭೀರ ಚಿಂತನೆಯಲ್ಲಿರುವುದು ಒಳ್ಳೆಯ ವಿಷಯವಾಗಿದೆ.

ಈ ಪ್ರಕ್ರಿಯೆ ಒಂದು ಸ್ವಾಗತಾರ್ಹ ಬೆಳವಣಿಗೆ. ಆದರೆ ಗರಿಷ್ಠ ಭದ್ರತೆಯ ನಂಬರ್ ಪ್ಲೇಟ್‌ಗಳ ವಿಚಾರದಲ್ಲಿ ಸರ್ಕಾರದ ನಿಲುವು ಇನ್ನೂ ಅಸ್ಪಷ್ಟವಾಗಿದೆ. ಲಭ್ಯವಿರುವ ಮಾಹಿತಿಗಳ ಪ್ರಕಾರ ಗರಿಷ್ಠ ಭದ್ರತೆಯ ನಂಬರ್ ಪ್ಲೇಟ್‌ಗಳನ್ನು ಕೇವಲ ಖಾಸಗೀ ವಾಹನಗಳಿಗೆ ಅಳವಡಿಸಲಾಗುವುದು ಮತ್ತು ವಾಣಿಜ್ಯ ಉದ್ದೇಶದ ವಾಹನಗಳಿಗೆ ಮತ್ತು ದ್ವಿಚಕ್ರ ವಾಹನಗಳ ಬಗೆಗೆ ಇನ್ನೂ ನಿರ್ಧಾರ ತೆಗೆದುಕೊಂಡತಿಲ್ಲ. ಅದರಲ್ಲಿ ಹಲವಾರು ವಾಣಿಜ್ಯ ಹಾಗೂ ಖಾಸಗಿ ವಾಹನಗಳಲ್ಲೂ ಫ್ಯಾನ್ಸಿ ನಂಬರ್ ಪ್ಲೇಟ್‌ಗಳನ್ನು ನೋಡಬಹುದು. ಎಲ್ಲಾ ರೀತಿಯ ವಾಹನಗಳು ಅಪಘಾತಕ್ಕೆ ಮತ್ತು ಅವಘಡಕ್ಕೆ ತುತ್ತಾದ ಸಂದರ್ಭದಲ್ಲಿ ಈ ನಿಯಮಾವಳಿ ಎಲ್ಲಾ ವಾಹನಗಳಿಗೆ ಅನ್ವಯಿಸುವುದು ಅಪೇಕ್ಷಣೀಯವೆನ್ನಬಹುದು.

ದೋಷಪೂರಿತ ನಂಬರ್ ಪ್ಲೇಟ್‌ಗಳಿಂದಾಗಿ, ಇನ್ಶೂರೆನ್ಸ್ ಕ್ಲೇಮ್ ಸಲ್ಲಿಸುವುದು ಮತ್ತು ಸೆಟ್ಲಮೆಂಟ್ ಆಗುವುದು ತುಂಬಾ ಕಠಿಣವಾಗುತ್ತದೆ. ಎಲ್ಲವೂ ಸರಿಯಾಗಿದ್ದರೆ ಮಾತ್ರ ಇನ್ಶೂರೆನ್ಸ್ ಕ್ಲೇಮ್ ಸೆಟ್ಲ್ ಆಗುವುದು. ಇತ್ತೀಚೆಗೆ ಸುಪ್ರೀಂ ಕೋರ್ಟ್‌ನ ಸೇಫ್ಟಿ ಕಮಿಟಿ, ಮೋಟಾರ್ ವಾಹನಗಳಿಗೆ 3 ಲಕ್ಷ ಮತ್ತು ದ್ವಿಚಕ್ರ ವಾಹನಗಳಿಗೆ 5 ಲಕ್ಷ ಪರಿಹಾರ ನೀಡುವಂತೆ ಶಿಫಾರಸ್ಸು ಮಾಡಿದ್ದು, ದೋಷಪೂರಿತ ನಂಬರ್ ಪ್ಲೇಟ್‌ಗಳಿಗಾಗಿ ದೊರಕುವ ಪರಿಹಾರವನ್ನು ಕಳೆದುಕೊಳ್ಳಬಾರದೆಂದು ವಾಹನ ಚಾಲಕರಿಗೆ ಈ ನಿಟ್ಟಿನಲ್ಲಿ ತಿಳಿ ಹೇಳುವ ಅಗತ್ಯವಿದೆ.

## ಕುದ್ರೆಪ್ಪಾಡಿ ಶ್ರೀ ಜಗನ್ನಾಥ ಆಳ್ವರವರಿಗೆ

# “ಕುವೆಂಪು ವಿಶ್ವ ಮಾನವ ಪ್ರಶಸ್ತಿ”



ಹಿರಿಯ ಕವಿ ಲೇಖಕ ಕುದ್ರೆಪ್ಪಾಡಿ ಶ್ರೀ ಜಗನ್ನಾಥ ಆಳ್ವರು ಇತ್ತೀಚೆಗೆ ಮಂಡ್ಯ ಜಿಲ್ಲೆಯಲ್ಲಿ ಜರಗಿದ ರಾಜ್ಯ ಮಟ್ಟದ ಕವಿಗೋಷ್ಠಿಯಲ್ಲಿ **“ಕುವೆಂಪು ವಿಶ್ವ ಮಾನವ ಪ್ರಶಸ್ತಿ”**ಗೆ ಆಯ್ಕೆಯಾಗಿದ್ದಾರೆ.

ವಿಜಯಾ ಬ್ಯಾಂಕಿನ ಹಿರಿಯ ಅಧಿಕಾರಿಯಾಗಿ ನಿವೃತ್ತರಾದ 82ರ ಹರೆಯದ ಕುದ್ರೆಪ್ಪಾಡಿಯವರು ತುಳು– ಕನ್ನಡ ಭಾಷೆಯಲ್ಲಿ ನೂರಾರು ಕವಿತೆಗಳನ್ನು ರಚಿಸಿದ್ದಾರೆ. ಹಲವು ಕವಿಗೋಷ್ಠಿಯಲ್ಲಿ ಭಾಗವಹಿಸಿರುವುದಲ್ಲದೆ ನಾಟಕ, ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ‘ಗುತ್ತುದ ಗೌರವೊ’ ಕೃತಿಗೆ ಪಣಿಯಾಡಿ ಪ್ರಶಸ್ತಿ ಲಭಿಸಿದೆ.

ಬೆಂಗಳೂರು ಬಂಟರ ಸಂಘದ ಪರವಾಗಿ ಆಳ್ವರಿಗೆ ಹಾರ್ದಿಕ ಅಭಿನಂದನೆಗಳು.

# ಕನ್ನಡ ಎನೆ ಕಿವಿ ನಿಮಿರುವುದು!



ಕೆ. ಪ್ರಫುಲ್ಲಚಂದ್ರ ಶೆಟ್ಟಿ

ನನ್ನ ತಾಯ್ನುಡಿ ತುಳು. ತುಳು ಹೆತ್ತಬ್ಬೆಯಾದರೆ, ಕನ್ನಡಾಂಬೆಯ ಎದೆಯ ಹಾಲುಂಡು ಬೆಳೆದವರು ನಾವು. ಕನ್ನಡ ಕಲಿತದ್ದು ಐದನೆಯ ವಯಸ್ಸಿನಲ್ಲಿ, ಸರಕಾರಿ ಶಾಲೆ ಸೇರಿದ ಮೇಲೆ!

ರಾಗಬದ್ಧವಾಗಿ ಕವಿತೆಗಳನ್ನು ಸುಶ್ರಾವ್ಯವಾಗಿ ಹಾಡಿ ಕಲಿಸಿ, ಸ್ಫುಟವಾದ, ವ್ಯಾಕರಣಬದ್ಧವಾದ ಕನ್ನಡದಲ್ಲೇ ಭೋದಿಸಿ, ಬಾಲ್ಯದಲ್ಲಿ ಕನ್ನಡದ ಮೇಲೆ ಪ್ರೀತಿ ಉಕ್ಕಿ ಹರಿಯುವಂತೆ ಮಾಡಿದವರು ಪ್ರಾತಃಸ್ಮರಣೀಯರಾದ ಎಷ್ಟೋ ಗುರುಗಳು!

ಹೊಟ್ಟೆ ಪಾಡಿಗಾಗಿ ದೇಶವಿಡೀ ಸುತ್ತಿ, ಇಪ್ಪತ್ತು ವರ್ಷಗಳ ನಂತರ ಬೆಂಗಳೂರಿಗೆ ಕಾಲಿಟ್ಟರೆ ಆದ ಅನುಭವವೆ ಬೇರೆ!

ನಾನೊಂದು ಸಂಕಲ್ಪ ಮಾಡಿದ್ದೆ, ಬೆಂಗಳೂರಿನಲ್ಲಿ ಎಲ್ಲಿ ಹೋದರೂ ಕನ್ನಡದಲ್ಲೇ ಮಾತನಾಡುವುದು. ಅವರಿಗೆ ಭಾಷೆ ಬರದಿದ್ದರೆ ಮಾತ್ರ, ಹಿಂದಿ, ಇಂಗ್ಲಿಷಿನ ಪ್ರಯೋಗ.

ಎರಡು ವರ್ಷದ ಹಿಂದೆ ಬೆಂಗಳೂರಿನ ಪ್ರತಿಷ್ಠಿತ ವಸತಿಗುಚ್ಛದಲ್ಲಿ ಬಾಡಿಗೆಗೆ ಮನೆ ಲಭಿಸಿತ್ತು. ಮನೆ ಕೆಲಸಕ್ಕೆ ಆಳು ಹುಡುಕುತಿದ್ದೆವು, ಒಬ್ಬಾಕೆ ಬಂದಳು. ಪಟ ಪಟನೆ ಹತ್ತು ನಿಮಿಷ ಮಾತನಾಡಿದಳು, ತಮಿಳಿನಲ್ಲಿ! ಅವಳ ಮಾತು ಮುಗಿದ ನಂತರ ಕೇಳಿದೆ,

"ಏನಮ್ಮ, ಕನ್ನಡ ಬರೋದಿಲ್ವೆ?"

"ನಾವು ಕನ್ನಡದೋರೆ ಸೋಮಿ, ಆದರೆ ಇಲ್ಲಿ ಯಾರೂ ಕನ್ನಡ ಮಾತನಾಡೋಲ್ಲ"

ಇಪ್ಪತ್ತೈದು ವರ್ಷದ ಹಿಂದೆ ನಾನು ಇದೇ ಬೆಂಗಳೂರಿನಲ್ಲಿ ವಾಸವಾಗಿದ್ದೆ. ಆಗ ಪರಿಸ್ಥಿತಿ ಇಷ್ಟೊಂದು ಕೆಟ್ಟಿರಲಿಲ್ಲ. ಅಲ್ಲಲ್ಲಿ ಕನ್ನಡದ ಮಾತುಗಳು ಕಿವಿಗೆ ಬೀಳುತಿದ್ದವು!

ಪೇಟೆಯಲ್ಲಿ ಸಾಲು ಸಾಲಾಗಿ ಮಾರ್ವಾಡಿ ಅಂಗಡಿಗಳು. ಏನೋ ಸಾಮಾನು ಬೇಕಿತ್ತು. ಕನ್ನಡದಲ್ಲೆ ಕೇಳಿದೆ. ಹಿಂದಿಯಲ್ಲಿ ಉತ್ತರಿಸಿದ. ಅವನ ಮುಖದಲ್ಲಿ ಮೂಡಿದ ಅಸಮಧಾನವನ್ನು ಅಲಕ್ಷ್ಯ ಮಾಡಿ ಕನ್ನಡದಲ್ಲೇ ಮಾತನಾಡಿ ಸಾಮಾನು ಖರೀದಿ ಮಾಡಿಕೊಂಡು ಬಂದೆ.

ಇನ್ನೊಂದು ಅನುಭವ ಒಂದು ದರ್ಶನಿ ಹೋಟೆಲಿನದ್ದು. ಕುಂದಾಪುರದ ಪಕ್ಕಾ ಕನ್ನಡಿಗರ ಹೋಟೆಲು. ನಾನು ಗಲ್ಲಾ ಪೆಟ್ಟಿಗೆಯ ಹತ್ತಿರ ನಿಂತಿದ್ದೆ. ಕ್ಯಾಷಿಯರ್ ಪ್ರತಿ ಗಿರಾಕಿಯ ಹತ್ತಿರ ಹಿಂದಿಯಲ್ಲಿಯೇ ಮಾತನಾಡುತಿದ್ದ. ನನ್ನ ಬಳಿಯೂ ಹಿಂದಿಯಲ್ಲೇ ಮಾತನಾಡಲು ಆರಂಭ ಮಾಡಿದ. ನನ್ನ ವ್ಯವಹಾರ ಕನ್ನಡದಲ್ಲೆ ಮುಗಿಸಿ ಅವನಿಗೆ ಕೇಳಿದೆ:

"ಅಲ್ಲ ಸ್ವಾಮಿ, ನೀವೇ ಎಲ್ಲರ ಜೊತೆ ಹಿಂದಿಯಲ್ಲಿ ಮಾತನಾಡಿದರೆ ಹೇಗೆ?"

"ಎಲ್ಲ ಟೆಕ್ಕಿಗಳು, ಒಬ್ಬರಿಗೂ ಕನ್ನಡ ಬರುವುದಿಲ್ಲ, ನಮ್ಮ ವ್ಯಾಪಾರ ನಡೀಬೇಕಲ್ಲ"

ಸ್ವಲ್ಪ ಖಾರವಾಗಿಯೇ ಹೇಳಿದ!

ನಾನು ಹೇಳಿದೆ:

"ನೀವು ಈ ತರಹ ನಡಕೊಂಡರೆ ಇನ್ನು ಇಪ್ಪತ್ತೈದು ವರ್ಷ ಕಳೆದರೂ ಅವರು ಕನ್ನಡ ಕಲಿಯೋದಿಲ್ಲ. ನೀವು ಕನ್ನಡದಲ್ಲೇ ಮಾತನಾಡಿದರೆ ಅವರೂ ಅನಿವಾರ್ಯವಾಗಿ ಪ್ರಯತ್ನ ಪಟ್ಟು ಕಲೀತಾರೆ."

ನಾನೇನೂ ಭಾಷೆಯ ದುರಭಿಮಾನಿಯಲ್ಲ. ಭಾಷೆ ಕೇವಲ ಸಂವಹನದ ಮಾಧ್ಯಮ, ಅಷ್ಟೆ. ನನಗೆ ಕನ್ನಡ ಕಸ್ತೂರಿ. ತೆಲುಗನಿಗೆ ತೆಲುಗು ಕಸ್ತೂರಿ! ತಮಿಳನಿಗೆ ತಮಿಳು ಕಸ್ತೂರಿ! ಮೂಗನಿಗೆ ಕೈಭಾಷೆಯೇ ಕಸ್ತೂರಿ!


ಆದರೆ ದೇಶ ಇಡೀ ಸುತ್ತಿದ ನನಗೆ ಬೆಂಗಳೂರಿನಲ್ಲಿ ಕಂಡಷ್ಟು ಭಾಷೆಯ ಬಗ್ಗೆ ಅಭಿಮಾನಶೂನ್ಯತೆ, ಬೇರೆ ಯಾವ ಪ್ರದೇಶದಲ್ಲೂ ಕಾಣಲಿಲ್ಲ.

ನಾನು ಒಂದು ವರ್ಷ ಚೆನ್ನೈಯಲ್ಲಿದ್ದೆ. ಬಾಲ್ಯದಲ್ಲಿ ಕೆಲವು ಶಿವಾಜಿ ಗಣೇಶನ್, ಎಂ.ಜಿ.ಆರ್. ನಾಯಕರಾಗಿ ನಟಿಸಿದ ವೀರಾವೇಶದ ಸಿನೆಮಾ ನೋಡಿದ್ದು ಬಿಟ್ಟರೆ ತಮಿಳು ಭಾಷೆಯ ಜ್ಞಾನ ಅಷ್ಟಕ್ಕಷ್ಟೆ. ತಮಿಳು ಬಿಟ್ಟು ಬೇರೆ ಭಾಷೆ ಮಾತನಾಡುವವರು ಅಲ್ಲಿ ಒಬ್ಬರೂ ಸಿಗಲಿಲ್ಲ. ಅತಿ ಕಷ್ಟದಿಂದ ಆವಶ್ಯಕ ಶಬ್ಧಗಳನ್ನು ಕಲಿತು ವ್ಯವಹಾರ ಮುಗಿಸುತ್ತಿದ್ದೆ.

ಬೆಂಗಳೂರಿನ ಕಥೆಯೆ ಬೇರೆ. ಇಲ್ಲಿ ಕನ್ನಡ ಬಿಟ್ಟು ಯಾವ ಭಾಷೆ ಗೊತ್ತಿದ್ದರೂ ಈಸಬಹುದು, ಈಸಿ ಜೈಸಬಹುದು.

(23ನೇ ಪುಟಕ್ಕೆ)



ನಿಮ್ಮ ಶೈಕ್ಷಣಿಕ ಗುರಿಗಳನ್ನು
ವಿಜಯ ಬ್ಯಾಂಕ್‌ನೊಂದಿಗೆ ಸಾಧಿಸಿ
ವಿಜಯ ಶೈಕ್ಷಣಿಕ ಸಾಲ
• ಭಾರತದಲ್ಲಿ ವ್ಯಾಸಂಗಕ್ಕೆ ₹ 10 ಲಕ್ಷವರೆಗಿನ ಸಾಲ
• ವಿದೇಶಗಳಲ್ಲಿ ವ್ಯಾಸಂಗಕ್ಕೆ ₹ 20 ಲಕ್ಷಗಳವರೆಗಿನ ಸಾಲ
• ಅರ್ಹ ಅಭ್ಯರ್ಥಿಗಳಿಗೆ ಹೆಚ್ಚಿನ ಮಿತಿಯನ್ನು ಪರಿಗಣಿಸಲಾಗುವುದು.
• ಸುಲಭ ಕಂತುಗಳು
• ಅನುಕೂಲಕರ ಮರುಪಾವತಿ ಅವಧಿ 15 ವರ್ಷಗಳವರೆಗೆ (ಮೊರಟೋರಿಯಂ ಅವಧಿಯ ನಂತರ)
• ವಿದ್ಯಾರ್ಥಿನಿಯರಿಗೆ 0.5% ಬಡ್ಡಿದರದಲ್ಲಿ ರಿಯಾಯಿತಿ
• ವಿದ್ಯಾಲಕ್ಷ್ಮಿ ಜಾಲತಾಣದಿಂದ (www.vidyalakshmi.co.in) ಅರ್ಜಿಗಳನ್ನು ಸಲ್ಲಿಸಬಹುದು
• ಅರ್ಹ ವಿದ್ಯಾರ್ಥಿಗಳಿಗೆ ಬಡ್ಡಿ ರಿಯಾಯಿತಿ ಸಹಾಯ ಸೌಲಭ್ಯ ಲಭ್ಯವಿದೆ
ಇಂದೇ ಶಾಖೆಯನ್ನು ಸಂಪರ್ಕಿಸಿ
ವಿಜಯ ಬ್ಯಾಂಕ್
VIJAYA BANK
ವಿಜಯ ಬ್ಯಾಂಕ್ ಮತ್ತು ನೀವು


Aura Jewels®
Diamonds | Gold | Silver
ANTIQUE DIAMOND COLLECTION
* Valet parking available
Aura Jewels®
Diamonds | Gold | Silver
No. 297, 1st N Block,
Rajajinagar, Bangalore-10.
Mob : +91-9611948081
Ph : 080-23321188 / 89
info@aurajewels.in

ADVT


Little Elly
LITTLE WORLD OF JOY...
A Franchise Opportunity in Bengaluru
you don't want to miss out on!
Playgroup | Nursery | Kindergarten
Over 125+ Successful Franchisee Centres
60000+ Satisfied Children and Parents
Most Admired and Fastest Growing Preschool Chain
For Franchise Enquiries across Karnataka
Call: 99000 83813 / 76763 80000 E mail: franchise@littleelly.com
Corporate Office: Learning Edge India Pvt. Ltd., #2, Honeydew Mansion, Near BDA Complex, HSR Layout, 7th Sector, Bangalore – 560 102 Tel: 080 2572 2464 / 2572 2474
www.littleelly.com

ADVT.


Prestige
GROUP
PRESTIGE
JINDAL CITY
PREMIUM LOCATION NEAR TO PROPOSED
JINDAL METRO STATION.
1 / 2 / 3 / 4 Bedroom Apartments
Price Starting from Rs. 4600/-* onwards
MARKETING PARTNERS
AUREITY
Pooja Shetty
+91 98863 13376
pooja@aureity.in
Arpan Batra
+91 99866 53451
arpan@aureity.in

ADVT


ಬಿ. ಶಿವಾನಂದಶೆಟ್ಟಿ
ಶ್ರೀಯುತ ಬಿ.ಎಂ. ಸುಕುಮಾರ್ ಶೆಟ್ಟಿ
ಬೈಂದೂರು ವಿಧಾನಸಭಾ ಕ್ಷೇತ್ರದ
ನೂತನ ಶಾಸಕರಾಗಿ ಪ್ರಚಂಡ
ಬಹುಮತದಿಂದ ಆಯ್ಕೆಯಾಗಿರುವ ನಿಮಗೆ
ಹೃದಯಪೂರ್ವಕ ಅಭಿನಂದನೆಗಳು
ನವೀನ್ ಶೆಟ್ಟಿ
ಉಮೇಶ್ ಶೆಟ್ಟಿ
ಜಯರಾಮ್ ಶೆಟ್ಟಿ
ನಿಮ್ಮ ಶಾಸಕರಾದ ಅವಧಿಯಲ್ಲಿ
ಬೈಂದೂರು ಕ್ಷೇತ್ರದ ಸರ್ವಾಂಗೀಣ
ಅಭಿವೃದ್ಧಿಯಾಗಿ ಕರ್ನಾಟಕ
ರಾಜ್ಯದಲ್ಲಿ ಮಾದರಿ
ವಿಧಾನಸಭಾ ಕ್ಷೇತ್ರವನ್ನಾಗಿ
ಗುರುತಿಸಲಿ ಎಂದು
ಹಾರೈಸುವ ನಿಮ್ಮವರು
ಜೀವನ್ ಶೆಟ್ಟಿ
ಸಂತೋಷ್‌ಕುಮಾರ್ ಶೆಟ್ಟಿ

ADVT

# ಭಾವಪೂರ್ಣ ಶ್ರದ್ಧಾಂಜಲಿ



## ಶ್ರೀ ಬಿ.ಪಿ ಕಿಶೋರ್

ನಿಧನ : 16.05.2018

ಬಂಟ ಸಮುದಾಯದ ಹಿರಿಯರು ಹಾಗೂ ನಮಗೆಲ್ಲ ಮಾರ್ಗದರ್ಶಕರಾಗಿದ್ದ
ಶ್ರೀ ಬಿ. ಪಿ ಕಿಶೋರ್‌ರವರ ನಿಧನಕ್ಕೆ ಸಂತಾಪ ವ್ಯಕ್ತ ಪಡಿಸುತ್ತಾ, ಅಗಲಿದ ದಿವ್ಯಾತ್ಮಕ್ಕೆ
ಚಿರಶಾಂತಿ ಕೋರುತ್ತಿದ್ದೇವೆ.

ಶ್ರೀ ಸುರೇಶ್ ಹೆಗ್ಡೆ ಕೊಳ್ಕೆಬೈಲ್
ಶ್ರೀ ಸಂತೋಷ್ ಶೆಟ್ಟಿ, ಮೈತ್ರಿ ಫೈನಾನ್ಸ್
ಶ್ರೀ ಕೆ. ಭೋಜರಾಜ್ ಶೆಟ್ಟಿ
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ
CA. ವಿಜಯ್ ಶೆಟ್ಟಿ
ಶ್ರೀ ಪ್ರಸಾದ್ ಶೆಟ್ಟಿ ಪಿ.
ಶ್ರೀ ಪ್ರವೀಣ್ ಚಂದ್ರ ಶೆಟ್ಟಿ

ಶ್ರೀ ಆರ್. ಉಪೇಂದ್ರ ಶೆಟ್ಟಿ
ಶ್ರೀ ಎಂ. ಮಧುಕರ ಶೆಟ್ಟಿ
ಶ್ರೀ ದೀಪಕ್ ಶೆಟ್ಟಿ
ಶ್ರೀ ಅಮರನಾಥ್ ಶೆಟ್ಟಿ ಹೆಚ್
ಶ್ರೀ ರವೀಂದ್ರನಾಥ ಮಾರ್ಲ
ಶ್ರೀ ಶಾಂತರಾಮ ಶೆಟ್ಟಿ ಕೆ.

ADVT

(18ನೇ ಪುಟದಿಂದ)

ಇಲ್ಲಂತೂ ಉತ್ತರಭಾರತೀಯರು ಸಿಕ್ಕಾಪಟ್ಟೆ ತುಂಬಿದ್ದಾರೆ. ಇಲ್ಲಿನ ಸಮಶೀತೋಷ್ಣ ಹವೆಗೆ, ಉತ್ತಮ ಕಾನೂನು ವ್ಯವಸ್ಥೆಗೆ ಮಾರು ಹೋಗಿ ಇಲ್ಲೇ ನೆಲೆ ನಿಂತಿದ್ದಾರೆ. ಶೇಕಡಾವಾರು ನೋಡಹೋದರೆ, ಇಪ್ಪತ್ತೈದು ತೆಲುಗು ಭಾಷಿಕರು, ಇಪ್ಪತ್ತೈದು ತಮಿಳರು, ಇಪ್ಪತ್ತೈದು ಉತ್ತರ ಭಾರತೀಯರು ತುಂಬಿದ್ದಾರೆ. ನಮ್ಮಂತಹ, "ಹೋಗ್ಲಿ ಬಿಡಿ ಸಾರ್" ಸಂಸ್ಕೃತಿಯ, ಅನ್ಯ ಭಾಷೆಯನ್ನೆ ಆಡಿ, ಇತರರನ್ನು ಮೆಚ್ಚಿಸುವ, ಬಡ ಕನ್ನಡಿಗರು ಶೇಕಡ ಇಪ್ಪತ್ತೈದು ಕಷ್ಟದಲ್ಲಿ ಸಿಗಬಹುದು!

ನಾವಿರುವ ಅಪಾರ್ಟ್ಮೆಂಟಿನಲ್ಲಿ ಒಂದು ಚಾಟ್ ಅಂಗಡಿಯಿದೆ. ಹೋಗಿ ಕನ್ನದಲ್ಲಿ ಏನೋ ಕೇಳಿದೆ.

"ಕ್ಯಾ, ಕ್ಯಾ, ಕ್ಯಾ" ಅಂದ.

ಹಿಂದಿಯಲ್ಲಿ ಮಾತನಾಡಿದಾಗ ತಿಳಿದುಬಂತು, ಅವನು ಬೆಂಗಳೂರಿಗೆ ಬಂದು ವ್ಯಾಪಾರ ಮಾಡುತ್ತಿರುವ ಐದನೇ ವರ್ಷ.

ಕಳಕಳಿಯಿಂದ ಕೇಳಿದೆ:

"ಅಲ್ಲ ಮಹರಾಯ, ಐದು ವರ್ಷದಿಂದ ಇಲ್ಲಿಯ ಭಾಷೆ ಕಲಿಯುವ ಪ್ರಯತ್ನ ಮಾಡಲಿಲ್ಲವೆ?"

ನಕ್ಕ. ಮುಖದಲ್ಲಿ ಕಲಿಯುವ ಆವಶ್ಯಕತೆಯೆ ಬೀಳಲಿಲ್ಲ ಅನ್ನುವ ಉದಾಸೀನ ಭಾವ!

ರಾತ್ರಿ ಎರಡು ಗಂಟೆಗೆ ಒಂದು ಅಟೋ ಹಿಡಿದೆ. ಚಾಲಕ ಲೀಲಾಜಾಲವಾಗಿ ಹಿಂದಿಯಲ್ಲಿ ಮಾತನಾಡಲು ಆರಂಭಿಸಿದ.

"ಏನ್ರೀ, ಕನ್ನಡ ಬರೋಲ್ವೆ?"

ಕೊಂಚ ಅಸಮಧಾನದಿಂದಲೆ ಕೇಳಿದೆ.

"ಬರದೆ ಏನು ಸಾರ್"

ಅಂದ ನಗುತ್ತ.

"ಮಾತಾಡಿ ಮತ್ತೆ" ಅಂದೆ.

ಮನೆ ಎಲ್ಲಿ ಎಂದು ಕೇಳಿದಾಗ, ಶಿವಾಜಿನಗರ ಅಂದ.

ಬೆಂಗಳೂರಿನ ದೊಡ್ಡ ದೊಡ್ಡ ರೆಸ್ಟೋರೆಂಟುಗಳಲ್ಲೂ ಇಂಗ್ಲಿಷ್ ಅಥವಾ ಹಿಂದಿಯದೆ ಕಾರುಬಾರು! ಅಂತಹ ಪವಿತ್ರ ಜಾಗಗಳಲ್ಲಿ, ಕನ್ನಡದ ಬಗ್ಗೆ ನನ್ನ ಮೊಂಡುತನ ನೋಡಿ, ಕೀಳರಿಮೆ ಅನುಭವಿಸಿ, ಮನೆಯಲ್ಲಿ ನನಗೆ ಸಾಕಷ್ಟು ಬುದ್ಧಿ ಮಾತುಗಳು ಸಿಗುತ್ತವೆ.

ನಾನಂತೂ ನಿರ್ಧಾರ ಮಾಡಿ ಆಗಿದೆ. ದೊಮ್ಮಲೂರಿನಲ್ಲಿ ತೆಲುಗೇ ಆಡಲಿ, ಕಾಕ್ಸ್‌ಟೌನಿನಲ್ಲಿ ತಮಿಳೇ ಮಾತನಾಡಲಿ ಅಥವ ಶಿವಾಜಿನಗರದಲ್ಲಿ ಉರ್ದು ಮಾತನಾಡಲಿ, ನಾನು ಕನ್ನಡದಲ್ಲೇ ಉತ್ತರಿಸುತ್ತೇನೆ. ಯಾವ ಫೈವ್ ಸ್ಟಾರ್ ಹೋಟೆಲಿಗೆ ಹೋದರೂ ಕನ್ನಡ ಬಿಡುವುದಿಲ್ಲ!

ನಾವು ಕನ್ನಡಿಗರು ಎಂತಹ ಉದಾರ ಹೃದಯಿಗಳು, ಕನ್ನಡ ಎಷ್ಟು ಶ್ರೇಷ್ಠ ಎಂದು ಹೊಗಳಿಕೊಳ್ಳುವ ಭಾವಗೀತೆಗಳಲ್ಲಿ, ಸಿನೆಮ ಹಾಡುಗಳಲ್ಲಿ ನಮ್ಮ ಭಾಷಾಪ್ರೇಮ ತೋರಿಸಿದರೆ ಸಾಲದು!

ತಮ್ಮ ವ್ಯಾಪಾರ, ನೌಕರಿ, ಸ್ವರಕ್ಷಣೆಗಾಗಿ ಬಂದು, ಇಲ್ಲಿಯ ಹವೆ, ನೆಲ, ಜಲ ಮೆಚ್ಚಿ, ಕುರಿಗಳಂತಹ ನಮ್ಮ ಕನ್ನಡಿಗರ ನಡುವೆ ನೆಲೆಸಿ, ಇಲ್ಲಿಯವರೇ ಆಗಿರುವ ಪರರಾಜ್ಯದವರು, ಕಿಂಚಿತ್ತಾದರೂ ಕನ್ನಡ ಕಲಿಯಲಿ. ಕಲಿಯದಿರುವ ಹಠಮಾರಿತನಇದ್ದರೆ ಕಲಿಸುವ ಬಾಧ್ಯತೆ ನಮ್ಮದು.

ಇದಕ್ಕೆ ನಾವು ದೊಡ್ಡ ಹೋರಾಟ ಏನೂ ಮಾಡಬೇಕಾಗಿಲ್ಲ. ಬೇರೆ ಭಾಷೆಯ ಬೋರ್ಡಿಗೆ ಕಪ್ಪು ಬಳಿಯಬೇಕಾಗಿಲ್ಲ. ವೇದಿಕೆಯ ಮೇಲೆ ಕನ್ನಡದ ಹಿರಿಮೆಯ ಬಗ್ಗೆ ಕೊರೆಯಬೇಕೆಂದಿಲ್ಲ. ಭಾವ ಗೀತೆ, ಚಿತ್ರಗೀತೆ ಹಾಡಬೇಕೆಂದಿಲ್ಲ. ಶುದ್ಧ, ಸ್ಪಷ್ಟ ಕನ್ನಡದಲ್ಲೆ, ದೈನಂದಿನ ಜೀವನದಲ್ಲಿ, ಎಲ್ಲಾ ಕಡೆ ವ್ಯವಹರಿಸುವ ಸಂಕಲ್ಪ ಮಾಡಿದರೆ ಸಾಕು, ಕನ್ನಡಾಂಬೆಯ ಸೇವೆ ಮಾಡಿದಂತೆ!

ತನ್ನಿಂತಾನೆ ಬೆಂಗಳೂರಿನಲ್ಲಿ, ಯಾಕೆ ಇಡೀ ಕರ್ನಾಟಕದಲ್ಲಿ, ಕನ್ನಡದ ಕಂಪು ಸೂಸತೊಡಗುತ್ತದೆ!

***

**'ಸ್ನೇಹ ಚಿಂತನೆ'ಯಲ್ಲಿ ಪ್ರಕಟಣೆಗೆ ಪ್ರಚಲಿತ ವಿದ್ಯಮಾನಕ್ಕೆ ಸಂಬಂಧಿಸಿದ, ಅಪ್ರಕಟಿತ ಲೇಖನ ಮತ್ತು ಓದುಗರ ಆಸಕ್ತಿಗೆ ಪೂರಕವಾದ ಬರಹಗಳಿಗೆ ಆದ್ಯತೆ ನೀಡಲಾಗುವುದು.**

**–ಸಂಪಾದಕ ಮಂಡಳಿ**

# ದೈನಂದಿನ ಜೀವನಕ್ಕೆ ವ್ಯಕ್ತಿಯ ಆಚರಣೆಗಳು ಮತ್ತು ಸಂಪ್ರದಾಯಗಳ ಪ್ರಸ್ತುತತೆ



ಮಮತ ಎಸ್.ಹೆಗ್ಡೆ

ಮಾನವ ಜೀವಿಯು ತನ್ನ ಬದುಕಿನ ಕಾಲಾವಧಿಯಲ್ಲಿ ತನ್ನ ಬದುಕಿನ ರೀತಿಗಾಗಿ ಅನೇಕ ರಿವಾಜುಗಳನ್ನು, ರೀತಿ–ನೀತಿಗಳನ್ನು ಅಳವಡಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಇಂತಹ ಆಚರಣೆಗಳು ಬದುಕಿಗೆ ಅರ್ಥ ಕೊಡುವುದರಲ್ಲಿ, ಕೌಟುಂಬಿಕ ಸಮಾಜಿಕ ಜೀವನವನ್ನು ಭಾಂದವ್ಯವನ್ನು ಗಟ್ಟಿಗೊಳಿಸುವಲ್ಲಿ ಪೂರಕವಾಗಿರುತ್ತವೆ. ನಿರ್ದಿಷ್ಟವಾಗಿ ಸಾಗುವಂತೆ ಮಾಡುವಲ್ಲಿ ತನ್ನದೇ ರೀತಿಯ ಅನೇಕ ರೀತಿ–ನಿಯಮಗಳ ಗಡಿಗಳನ್ನು ಒಳಪಟ್ಟಿರುವಂತೆ ಮಾಡಿಕೊಂಡಿದ್ದರೂ. ಅದು ಜಾತಿ ಹಾಗೂ ಧರ್ಮದ ನೆಲೆಯಲ್ಲಿ ಹೆಚ್ಚು ಪ್ರಸ್ತುತವೆನಿಸುತ್ತದೆ. ಆಯಾ ಜಾತಿ ಧರ್ಮದ ನಿಯಮ ನಿಬಂಧನೆಗಳು ಪ್ರದೇಶದಿಂದ ಪ್ರದೇಶಕ್ಕೆ ಅತ್ಯಂತ ವಿಭಿನ್ನವಾಗಿರುತ್ತದೆ. ಅದಕ್ಕೆ ಅಲ್ಲಿನ ಪರಿಸರ, ಭಾಷೆಗಳು ಕಾರಣವಾಗಿರುವುದು ಕಂಡುಬರುತ್ತದೆ. ಪ್ರಕೃತಿಯೊಂದಿಗಿನ ಅವಿನಾಭಾವ ಸಂಬಂಧವಿರುವ, ಧಾರ್ಮಿಕ ಹಿನ್ನೆಲೆಗೆ ಒತ್ತುಕೊಡುವ ಅದರೊಳಗೊಂದಾಗಿ ಜೀವಿಸುವ ಹಳ್ಳಿಗರ ಸಾಮಾಜಿಕ ಆಚರಣೆಗಳಿಗೂ ಪಟ್ಟಣಿಗರ ಆಚರಣೆಗಳಿಗೂ ತುಂಬ ವ್ಯತ್ಯಾಸವಿರುವುದು ಕಂಡುಬರುತ್ತದೆ. ಹಳ್ಳಿಯ ಆಚರಣೆಗಳು ಇನ್ನೂ ಸಾಂಪ್ರದಾಯಿಕ ಸೊಗಡನ್ನು ಉಳಿಸಿ ಬೆಳೆಸಿಕೊಂಡು ಬರಲು ಪ್ರಯತ್ನಿಸುತ್ತಿದ್ದರೂ ಆಧುನಿಕತೆಯ ಗಾಳಿ ಸೋಂಕಿ ಅಲ್ಲೂ ಕೃತ್ರಿಮ್ಮತೆಯ ಲೇಪನವನ್ನು ಹೊಂದಿರುವಂತದ್ದು ಇತ್ತೀಚಿನ ದಿನಗಳಲ್ಲಿ ನಾವು ಕಾಣುತ್ತೇವೆ. ಪಟ್ಟಣಿಗರು ಆಚರಣೆಯಲ್ಲಿ ಥಳಕು–ಬಳಕಿನ ಕೆಲವೊಮ್ಮೆ ಸಾಂಕೇತಿಕತೆಯ ಸ್ವರೂಪವನ್ನೆಷ್ಟೇ ಉಳಿಸಿ ಬೆಳಸಿಕೊಂಡು ಬರುತ್ತಿರುವುದು ಕಂಡುಬರುತ್ತಿದೆ. ದೈನಂದಿನ ಬದುಕು ಯಾಂತ್ರಿಕತೆಯತ್ತ ಸಾಗುತ್ತಿರುವುದು ಅದಕ್ಕಾಗಿ ಮೋಜು ಮಸ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿರುವುದು ವಿಪರ್ಯಾಸವೆನಿಸಲು ತೊಡಗಿದೆ. ಇದರಿಂದಾಗಿ ಸಂಬಂಧಗಳು ಅರ್ಥಕಳೆದುಕೊಳ್ಳತೊಡಗಿದೆ ಎಂದರೆ ತಪ್ಪಾಗಲಾರದು.

ಪಟ್ಟಣಿಗರಲ್ಲಿ ಹಳ್ಳಿಗಳಿಂದ ವಲಸೆ ಬಂದವರು ಹಿಂದಿನಿಂದ ಪಾಲಿಸಿಕೊಂಡು ಬಂದ ಅನೇಕ ನಂಬಿಕೆಗಳನ್ನು ಹಿಂದಿನ ತಲೆಮಾರಿನವರಷ್ಟೇ ಮಹತ್ವಕೊಟ್ಟು ಸಂಪ್ರದಾಯವನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಹೆಚ್ಚುತ್ತಿರುವ ವೃದ್ಧಾಶ್ರಮಗಳು ಅವರ ಭಾವನೆಗಳಿಗೆ ಬೆಲೆಯಿಲ್ಲ ಎಂಬುದನ್ನು ಸೂಚಿಸುತ್ತವೆ. ಅಂತರ್–ಜಾತಿಯ ವಿವಾಹಗಳು ಕೂಡ ಆಚರಣೆಯ ವಿಶಯದಲ್ಲಿ ಸಂಪ್ರದಾಯವನ್ನು ನಡೆಸುವಲ್ಲಿ ಉಳಿಸಿಕೊಳ್ಳುವಲ್ಲಿ ವಿವಿಧ ಜಾತಿ ಧರ್ಮಗಳನ್ನು ಹೊಂದಿದ್ದಾಗ ಎಡಬಿಡಂಗಿತನ ವನ್ನು ಅನುಭವಿಸುತ್ತವೆ ಎಂದರೆ ತಪ್ಪಾಗಲಾರದು. ಮತ್ತು ಇವುಗಳು ಯಾವ ಆಚರಣೆಗಳಿಗೂ ಹೆಚ್ಚಿನ ಮಹತ್ವವನ್ನು ಕೊಡಲಾರದವುಗಳಾಗಿರುತ್ತವೆ. ಇದು ಕುಟುಂಬದ, ಸಾಮಾಜಿಕ, ಧಾರ್ಮಿಕ ಸಂಘರ್ಷಗಳಿಗೂ ಕಾರಣವಾಗುತ್ತಿವೆ. ಯುವ ಜನಾಂಗವು ಸಂಪ್ರದಾಯದ ಆಚರಣೆಗಳಿಗಿಂಥ ಬದಲಾದ ಕಾಲಕ್ಕೆ ತಕ್ಕಂತೆ ತನ್ನ ಜೀವನ ಶೈಲಿಯನ್ನು ಉಡುಪಿನಲ್ಲಿ, ಆಹಾರ ಪದ್ದತಿಯಲ್ಲಿ, ಅತಿಥಿ ಸತ್ಕಾರದಲ್ಲಿ ಹೊಸತನವನ್ನು ಹೊಂದಿರುವುದು ಅದನ್ನೆ ತನ್ನ ಮುಂದಿನ ಜನಾಂಗಕ್ಕೆ ಸೂಕ್ತ ರೀತಿಯಲ್ಲಿ ಮುಂದುವರೆಸಿಕೊಂಡು ಹೋಗುವಂತೆ ಮಾಡುವಲ್ಲಿ ಆಸಕ್ತರಾಗಿರುತ್ತಾರೆ. ಹಿಂದೆ ಆಚರಣೆಗಳು ಕೌಟುಂಬಿಕವಾಗಿ ಹೆಚ್ಚು ಅರ್ಥಪೂರ್ಣವಾಗಿ ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದರೆ ಒಟ್ಟು ಕುಟುಂಬ ಪದ್ಧತಿಯು ನಶಿಸಿ ಚಿಕ್ಕ ಕುಟುಂಬಗಳಲ್ಲಿನವರು ಸ್ನೇಹಿತರನ್ನಷ್ಟೇ ತಮ್ಮ ಆಚರಣೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿಕೊಂಡಿರುವುದು ಸಂಪ್ರದಾಯವನ್ನು ಮೀರಲು ಇರುವ ಆಧುನಿಕ ಕಾಲದ ವಿಪರ್ಯಾಸವು ನಿಯಮಗಳು ಆಗಿದ್ದು ಮುಂದೊಂದು ದಿನ ಕೇವಲ ಮೋಜು–ಮಸ್ತಿಗಳಿಗಷ್ಟೇ ಸೀಮಿತವಾಗಲು ಸಾಧ್ಯವಿದೆ.

ನಮ್ಮ ಹಿಂದಿನವರ ಪ್ರತಿ ಆಚರಣೆಗೂ ತನ್ನದೇ ಆದ ಅರ್ಥವಿದ್ದು ಅದು ಯಾವ ಪರಿಣಾಮವನ್ನು ಕುಟುಂಬ ಸಮಾಜದ ಮೇಲೆ ಪರಿಣಾಮ ಬೀರುತ್ತದೆ ಎಂದು ತಿಳಿದು

ಅದರ ಒಳಿತು ಕೆಡುಕುಗಳ ಜವಾಬ್ದಾರಿಯನ್ನು ಕುಟುಂಬದ ಹಿರಿಯರೇ ನಿರ್ವಹಿಸುತ್ತಾ ಕಿರಿಯರಿಗೆ ಮಾರ್ಗದರ್ಶಕರಾಗಿದ್ದರು. ಸಮಾಜದಲ್ಲಿನ ಸಂಘಟನೆಗಳ ಬೆಂಬಲವು ಇದಕ್ಕೆ ಪೂರಕವಾಗಿರುತ್ತಿದ್ದುದು ಅದಕ್ಕೆ ಮೌಲ್ಯವನ್ನು ಹೆಚ್ಚುಸುತ್ತಿತ್ತು. ಮತ ಮಾನ್ಯಗಳ, ಗುರುಹಿರಿಯರ ಮಾರ್ಗದರ್ಶನವು, ಕುಟುಂಬದ ಹಿರಿಯರು ತಪ್ಪಾದಾಗ ಬುದ್ಧಿ ಹೇಳಿ ಸರಿಪಡಿಸುವ ಅಧಿಕಾರವನ್ನು ಅವರು ಹೊಂದಿರುತ್ತಿದ್ದು ಆಚರಣೆಗಳು ಅನುಚಾನವಾಗಿ ಮುಂದುವರೆದುಕೊಂಡು ಬರಲು ಕಾರಣವಾಗಿದ್ದವು. ನಂಬಿಕೆಗಳನ್ನು ಕಳೆದುಕೊಂಡ ಯಾವ ಜನಾಂಗವೂ ಆಚರಣೆಗಳ ವಿಷಯದಲ್ಲೂ ಅಷ್ಟೇ ಅನಾಸಕ್ತಿಯನ್ನು ತೋರಿಸುತ್ತಿರುವುದು, ಜಾಗತೀಕರಣವೂ ಇದಕ್ಕೆ ಪೂರಕವಾಗಿ ಪ್ರಭಾವ ಬೀರಲು ಕಾರಣವಾಗಿದೆ ಎಂದರೆ ತಪ್ಪಾಗಲಾರದು. ಕಲೆ, ಸಿನಿಮಾ, ನಾಟಕಗಳಂಥ ಮಾಧ್ಯಮಗಳು ಕೂಡ ಆಚರಣೆಗಳನ್ನು ಬದಲಾಯಿಸುವಲ್ಲಿ ಹೊಸದಿಕ್ಕನ್ನು ತೋರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಆಧುನಿಕ ಸಾಹಿತ್ಯವೂ ಇದಕ್ಕೆ ಪೂರಕವಾಗಿ ಹೊರಬರುತ್ತಿರುವುದು ಕಾರಣವಾಗಿದೆ. ಬದಲಾವಣೆ ಜಗದ ನಿಯಮ ಎಂಬ ಕವಿವಾಣಿಯಂತೆ ಹಳತು–ಹೊಸತುಗಳನ್ನು ಮಾನವ ಜೀವಿಯು ತನ್ನ ಸಂತೋಷಕ್ಕಾಗಿ ತನ್ನದೇ ರೀತಿಯಲ್ಲಿ ರೂಪಾಂತರವಾದರೂ ಸರಿ ನಂಬಿಕೆಗಳನ್ನು, ಆಚರಣೆಗಳನ್ನು ದೈನಂದಿನ ಜೀವನದಲ್ಲಿ ತೋರ್ಪಡಿಸುತ್ತಾ ಅಳವಡಿಸುತ್ತಾ ಮುಂದುವರಿದಲ್ಲಿ ಅದು ಜೀವನದ ಆಯಾ ಕಾಲದ ಅವಿಭಾಜ್ಯ ಅಂಗವಾಗಬಲ್ಲದು.

## ‘ಸದಾಶಯ’ ಬಿಸು ಸಂಚಿಕೆ ಬಿಡುಗಡೆ



ಸಂಘ ಸಂಸ್ಥೆಗಳು ವಿವಿಧ ಸಾಮಾಜಿಕ ಕಾರ್ಯಗಳ ಮೂಲಕ ಗುರುತಿಸಿಕೊಳ್ಳುವುದು ಸಾಮಾನ್ಯ. ಆದರೆ ಪತ್ರಿಕೆ ಮತ್ತು ಸಾಹಿತ್ಯ ಕೃತಿಗಳ ಪ್ರಕಟಣೆಯಿಂದ ಅವು ಶಾಶ್ವತ ನೆಲೆ ಕಂಡು ಕೊಳ್ಳುತ್ತವೆ ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ್ ಶೆಟ್ಟಿ ಬೆಳ್ಳಾರೆ ಹೇಳಿದ್ದಾರೆ. ಇಂಟರ್‌ನ್ಯಾಷನಲ್ ಬಂಟ್ಸ್ ವೆಲ್ಫೇರ್ ಟ್ರಸ್ಟ್ ವತಿಯಿಂದ ನಗರದ ಕುಡ್ಲ ಪೆವಿಲಿನ್ ಸಭಾಂಗಣದಲ್ಲಿ ‘ಸದಾಶಯ’ ತ್ರೈಮಾಸಿಕದ ‘ಬಿಸು ಸಂಚಿಕೆ’ಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಸಮಾಜದಲ್ಲಿರುವ ಪ್ರತಿಭೆಗಳನ್ನು ಪ್ರೋತ್ಸಾಹಿಸಿ ಸೂಕ್ತ ವೇದಿಕೆ ಒದಗಿಸುವುದರೊಂದಿಗೆ ವರ್ಷದಲ್ಲಿ ಒಂದೆರಡು ಮೌಲಿಕ ಗ್ರಂಥಗಳನ್ನು ಹೊರತರುವ ಮೂಲಕ ಭಾಷೆ ಮತ್ತು ಸಂಸ್ಕೃತಿಯನ್ನು ಬೆಳೆಸುವುದು ಸಂಘಟನೆಗಳ ಗುರಿಯಾಗಬೇಕು ಎಂದು ಅವರು ನುಡಿದರು.

ಪುತ್ತೂರು ಮಹಿಳಾ ಸರಕಾರಿ ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕ, ಪರಿಸರ ಚಿಂತಕ ಡಾ. ನರೇಂದ್ರ ರೈ ದೇರ್ಲ ‘ಬಿಸು ಸಂದೇಶ’ ನೀಡಿ ಮಾತನಾಡುತ್ತಾ ಈ ನೆಲದ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ತುಳುವರ ಆಚರಣೆಯ ಮೂಲಕ ನಮ್ಮ ಮುಂದಿನ ಜನಾಂಗದಲ್ಲಿ ನಿಸರ್ಗದ ಜೊತೆಗಿನ ಒಡನಾಟದ ಬಗೆಗಿನ ಮಹತ್ವವನ್ನು ತಿಳಿಸಿ ಜಾಗೃತಿ ಮೂಡಿಸಬೇಕಿದೆ ಎಂದರು.

ಟ್ರಸ್ಟ್ ಸ್ಥಾಪಕಾಧ್ಯಕ್ಷ ಎ. ಸದಾನಂದ ಶೆಟ್ಟಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ದೇವಿ ಎಜ್ಯುಕೇಶನ್ ಟ್ರಸ್ಟ್‌ನ ಕಾರ್ಯದರ್ಶಿ ಮೈನಾ ಎ. ಶೆಟ್ಟಿ ಬಿಸುಕಣಿ ಇಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

# YOUTH & THEIR SOCIAL RESPONSIBILITIES

*This article won the first prize in the essay competition in the above 18 age category.*



Devadas Shetty

Who is a youth? Our National youth policy - 2014 has adopted age group 15 to 29. For some it is the State of mind. But let us accept the widely considered view – "it is the time between childhood and adulthood (Maturity).

Social responsibilities is a vast area it could be anything from following rules of the land, helping people in distress to striving for all-round development of the society. Involving youth in socially responsible activities may keep them away from vices like drug, alcohol abuse etc. it will help to develop their social skills and eventually may goad them to take part in social and political processes. Youth may be persuaded to take up issues on blood donation, pollution free environment, education of under privileged children, conservation of water, untouchability & other social disparities etc. They can join reputed NGO's or seek their advice in this regard.

What ails the youth is the 'Chalta hai' attitude acquired from we elders. As we elders have indifferent attitude towards things, situations and politics, so do the youth have. We find it difficult even to follow a simple govt order. For example, despite a ban on the use of plastic bags, we continue to use them instead of using cloth or paper bags.

Home is the first school for children. The parents should open their eyes and broaden their minds. We need to inculcate good behavior and thinking ability in our kids. The ABCD of morals, discipline and cleanliness should start from hers. Later, school teachers should ensure these qualities and shape lives.

Our rotten education system is also to be blamed for the apathetic outlook. The current system particularly the school education is very stressful to our children and not relevant to life. We are not having what is basically needed to lead a productive, disciplined, united and socially responsible good quality life.

How to stem the rot especially the public education system? Apart from improving educational infrastructure, the following steps may be initiated to streamline the system.

1. Make moral science subject mandatory and consider it for ranking.
2. Introduce skill development learning and Vedic mathematics.
3. Include vocational training
4. Make yoga and other workouts obligatory
5. Train teachers in human relationship
6. Educate parents and arrange parent-teachers meetings.

Besides the above, debates and discussions on matters of national and global importance may be conducted at least once in a month As rightly said by Vincent Roosevelt "we cannot build future for our youth but we can build our youth for the future.

# ಕಾಲ ಬದಲಾತ್ಂಡ್

ಕಾಲ ಬದಲಾತ್ಂಡ್
ಅಂದ್ ಕಾಲ ಬದಲಾತ್ ಂಡ್

ನುಗ ನಾವೆರ್ಗ್
ಉದಲ್ ಪತ್ ದ್ಂಡ್
ಬಲಯಿ ಉಜ್ಜೆರ್ಗ್
ಮಣ್ಣ್ ಪತ್ ದ್ಂಡ್

ಪುಲ್ಲೇನಗ ಕಿಲೆತ್
ಲಕ್ಕಾವೆರೆ  ಗೂಡುಡು
ಪೂಂಜೆ ಇಜ್ಜಿ
ಮುಕ್ಕುರು ಕುಟ್ಟರೆ
ಕಿದೆಟ್
ಎರು ಇಜ್ಜಿ

ತಿಂಗೊಲ್ದ ಬೊಲ್ಪುಗು
ಒಡ್ಡು ಪರ್ಪರೆ ಇಜ್ಜಿ
ಕಂಡದ ಕೋಡಿಡ್
ಗಿರೆಂಗ್ ಕಾಯದ್
ತಿನರೆ ಇಜ್ಜಿ

ಬೊಳ್ಳದ ಬೊಲ್ಪುಗು
ಆಟೊಗು ಪೊವರೆ  ಇಜ್ಜಿ
ತುಡರ್ದ ಬೊಲ್ಪುಡು
ಕೋಲ ತೂವರೆ ಇಜ್ಜಿ

ಪುಲ್ಲೆಡ್ ಕಡಲ್ಡ್
ಪತ್ತಿನ ಮೀನ್ ಕನಪುನ
ಅಕ್ಕೆರ್  ಇಜ್ಜೆರ್
ಸೋರ್ತಿದಾನಿ
ಒಟ್ಟೆ ಕೋರಿ ಪತರ್ಪುನ
ಅಣ್ಣೆರ್ ಇಜ್ಜೆರ್

ಕೆಡ್ಡಸದಾನಿ
ಪುಂಡದಗ್ ಜರ ಬರ್ಪುಜಿ
ದಿಕ್ಕೆಲ್ಡ್ ಅರಿ ಪೊತ್ತುನ
ಕಮ್ಮನೆ ಅಡರುಜಿ
ಟೊಂಕ, ಚೆನ್ನೆಮಣೆ, ಪೊಕ್ಕು
ಬರಕಲ್ಡ್ ಲಾಗ ಪಾಡ್ರೆ ಇಜ್ಜಿ
ಮರಕೋತಿ ಕುಟ್ಟಿ ದೊಣ್ಣೆ,
ಬೆರಿ ಚೆಂಡ್, ಲಗೋರಿ ಇಜ್ಜಿ

ನೀರ್ ಡ್ ಮುಟ್ಟಾಟ
ಗೊಬ್ಬರೆ ಇಜ್ಜಿ
ಏರೆ ನೆರ  ನ ತಾರೆದ ಬೊಂಡ
ಪರ್ರೆ ಇಜ್ಜಿ

ತೋಡಮೆ ಲೈಪರೇ ಇಜ್ಜಿ
ಮೊರಂಪು ಗರಿಯರೆ ಇಜ್ಜಿ
ಪಜಿರ್ ಕೆತ್ತರೆ ಇಜ್ಜಿ
ಬೇಲಿ ಪಾಡರೆ ಇಜ್ಜಿ

ಪುಣ್ಕೆ ದಡರ್ದ
ಪೆಟ್ಟ್ ಇಜ್ಜಿ
ದೊಡ್ಡ ಮಲ್ತಿನ
ಮೀನ್ ದ  ಕಜಿಪು ಇಜ್ಜಿ

ಅರಗೆಲದ ದೊಂಬುಡು
ಕರ ಂಟ ರೆ  ಇಜ್ಜಿ
ಮರಿಯಾಲದ ಬರ್ಸೊಗು
ಉಬರ್ ಗುದ್ದರೆ ಇಜ್ಜಿ

ಕರಂಡೆ, ಪುಲಿ
ಚೂರಿಮುಳ್ಳು ಕುಂಟಲ್ದಾ
ಪರಂದ್ ತಿನೊಂದು
ಗುಡ್ಡೆ ತಿರ್ಗರೆ ಇಜ್ಜಿ

ತೋಡುಡು ಗುದ್ದೆ ಲ್
ಕುಟ್ರೆ ಇಜ್ಜಿ

ಶಿವರಾತ್ರೆಗ್ ಕಲ್
ದಕ್ಕರೆ ಇಜ್ಜಿ
ಪರ್ಬೊಗು ಕೊರಲ್
ಪೆಜ್ಜರೆ ಇಜ್ಜಿ

ಬೀಜ ಪೆಜ್ಜಿದ್
ಮಾರ್ರೆ ಇಜ್ಜಿ
ಕುರ್ಕಿಲ್ಡ್ ಬಿಜಿಕೆರೆ
ತುಂಬರೆ ಇಜ್ಜಿ

ಒರ್ಲ ಇರ್ಲ ದಪ್ಪರೆ ಇಜ್ಜಿ
ಎರ್ಲೆನ್ ಉರ್ದರೆ ಇಜ್ಜಿ
ಪೇ ಜಿ ದೆರ್ರೆ  ಇಜ್ಜಿ
ಊರೊಲ್  ಪಾಡ್ರೆ ಇಜ್ಜಿ

ಕೆನದೇ ಪುಂಡಿ ಇಜ್ಜಿ
ಬೈತರಿತ ಅಡ್ಡೆ ಇಜ್ಜಿ
ಸುಳ್ತಿ ಬೆಂಜನ ಇಜ್ಜಿ
ತಂಜನ  ನುಪ್ಪು ಇಜ್ಜಿ

ಅಂದ್  ಕಾಲ ಬದಲಾ ತ್ಂಡ್
ನೇಮ ಬದಲಾ ತ್ಂಡ್
ಕಲ್ಜಿಗದ ಗೊಬ್ಬು ಉಂದು
ನಡಪಡ್ ನಡಪಡ್
ನಡಪುನಾತ್ ನಡಪಡ್



● ದೀಪು ಶೆಟ್ಟಿ ದೊಡ್ಡಮನೆ

## ವಸುದೈವ ಕುಟುಂಬಕಂ

ಸರ್ವೇ ಜನೋ ಸುಖಿನೋಭವಂತು
ಹಾಡಿ ಹರಸಿದ ನಾಡು ನಮ್ಮದು
ನಾವೆಲ್ಲರೂ ಒಂದೇ ತಾಯಿಯ ಮಕ್ಕಳು
ಹಾಡಿ ನಲಿದವರು ನಮ್ಮವರು
ಸರ್ವ ಧರ್ಮ ಸಹಿಷ್ಣುಗಳು
ಅಂದು ನಮ್ಮನಾಳಿದ ನಮ್ಮ ದೊರೆಗಳು
ವಿಶ್ವವೇ ನಮ್ಮ ಕುಟುಂಬ
ತಿಳಿದು ನಡೆದವರೆಲ್ಲರೂ
ಸ್ವಾತಂತ್ರ್ಯಗಳಿಸಿ ಕಳೆದು ಹೋದೆವು
ಆರು ದಶಕಗಳು
ಇನ್ನೂ ಇಲ್ಲಿ ನಡೆಯುತಲಿದೆ
ನಿರಂತರ ನಿತ್ಯ ಶೋಷಣೆ
ಅನಾಚಾರ ಅತ್ಯಾಚಾರ
ಪ್ರಜಾಪ್ರಭುತ್ವ ಅರ್ಥ ಕಳೆದುಕೊಂಡಿದೆ
ದುಷ್ಟ ರಾಜಕಾರಣಿಗಳದೆ ಕಾರುಬಾರು
ಪ್ರಜೆಗಳಿನ್ನೂ ತೂಕಡಿಸುತ್ತಲೆ ಇದ್ದಾರೆ
ನಿದ್ರಿಸುವವರು ಇನ್ನಾದರೂ ಎಚ್ಚೆತ್ತುಕೊಳ್ಳಲಿ
ಹಕ್ಕುಗಳ ಜೊತೆ ಕರ್ತವ್ಯ
ಒಂದಕ್ಕೊಂದು ತೂಗಿ ಕೊಂಡಲ್ಲಿ
ಬದುಕು ಸಹ್ಯ
ಬದುಕ ಬೇಕು ಬದುಕಗೊಡಬೇಕು
ಬನ್ನಿ ಭಾರತೀಯರೆ ಬನ್ನಿ
ಇಂದೇ ನಾವು ನಾವಾಗಿ ಬದುಕಲು
ಪಣ ತೊಡೋಣ

● **ಡಾ. ಕರುಣಾಕರ ಶೆಟ್ಟಿ ಪಣಿಯೂರ್**

**'ಸ್ನೇಹ ಚಿಂತನೆ' ಬಗೆಗೆ ತಮ್ಮ ಅಭಿಪ್ರಾಯ ಸಲಹೆ–ಸೂಚನೆಗಳನ್ನು ಬರೆದು ತಿಳಿಸಿ.**

**–ಸಂಪಾದಕ**

## ಶ್ರದ್ಧಾಂಜಲಿ



**ಶ್ರೀಮತಿ ಪ್ರತಿಭಾ ಸಿ. ಶೆಟ್ಟಿ**
ಸದಸ್ಯತ್ವ ಸಂಖ್ಯೆ: CL000485

